ಸಂಪುಟ 01 । ಸಂಚಿಕೆ 236 ಶನಿವಾರ 31 ಅಕ್ಟೋಬರ್ 2026 । ಪುಟ 4 । ಬೆಲೆ–2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ರಾಷ್ಟ್ರೀಯ ಏಕತಾ ದಿನ (Rashtriya Ekta Diwas): ಭಾರತದ 'ಉಕ್ಕಿನ ಮನುಷ್ಯ' ಎಂದು ಕರೆಯಲ್ಪಡುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದ ನೆನಪಿಗಾಗಿ ಪ್ರತಿವರ್ಷ ಅಕ್ಟೋಬರ್ 31 ರಂದು ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲಾಗುತ್ತದೆ. ಗುಜರಾತ್‌ನಲ್ಲಿರುವ ವಿಶ್ವದ ಅತ್ಯಂತ ಎತ್ತರದ ಪ್ರತಿಮೆ 'ಏಕತಾ ಪ್ರತಿಮೆ' (Statue of Unity) ಯನ್ನು ಕೂಡ ಅಕ್ಟೋಬರ್ 31, 2018 ರಂದು ಲೋಕಾರ್ಪಣೆ ಮಾಡಲಾಯಿತು

2)ವಿಶ್ವ ನಗರಗಳ ದಿನ (World Cities Day): ಜಾಗತಿಕವಾಗಿ ನಗರೀಕರಣದ ಸವಾಲುಗಳನ್ನು ಎದುರಿಸಲು ಮತ್ತು ಸುಸ್ಥಿರ ನಗರ ಅಭಿವೃದ್ಧಿಯನ್ನು ಉತ್ತೇಜಿಸಲು ಅಕ್ಟೋಬರ್ 31 ರಂದು ವಿಶ್ವ ನಗರಗಳ ದಿನವನ್ನು ಆಚರಿಸಲಾಗುತ್ತದೆ.

3)ಹ್ಯಾಲೋವೀನ್ (Halloween / All Hallows' Eve): ಪಾಶ್ಚಾತ್ಯ ದೇಶಗಳಲ್ಲಿ ಅಕ್ಟೋಬರ್ 31 ರ ರಾತ್ರಿ ಹ್ಯಾಲೋವೀನ್ ಹಬ್ಬವನ್ನು ವಿಜೃಂಭಣೆಯಿಂದ ಆಚ–ರಿಸಲಾಗುತ್ತದೆ.

4)ವಿಶ್ವ ಉಳಿತಾಯ ದಿನ (World Savings Day): ಹಣ ಉಳಿತಾಯದ ಮಹತ್ವದ ಕುರಿತು ಜಾಗೃತಿ ಮೂಡಿಸಲು ವಿಶ್ವದ ಹಲವೆಡೆ ಅಕ್ಟೋಬರ್ 31 ರಂದು ಇದನ್ನು ಆಚರಿಸಲಾಗುತ್ತದೆ.

5)ಇಂದಿರಾ ಗಾಂಧಿ ಸ್ಮರಣೆ: ಭಾರತದ ಮಾಜಿ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು 1984ರ ಅಕ್ಟೋಬರ್ 31 ರಂದು ನಿಧನರಾದರು.

6)ರಾಷ್ಟ್ರೀಯ ಕ್ಯಾರಮೆಲ್ ಆಪಲ್ ದಿನÀ (National Caramel Apple Day): ಅಮೆರಿಕ ಸೇರಿದಂತೆ ವಿವಿಧೆಡೆ ಅಕ್ಟೋಬರ್ 31 ರಂದು ಈ ದಿನವನ್ನು ಆಚರಿಸಲಾಗುತ್ತದೆ.

ಸುಭಾಷಿತ

ಕ್ರಿಯಾಶೀಲರಾಗಿ ಜೀವನ ನಡೆಸಬೇಕು.
ಬಡತನವೇ ಇರಲಿ, ಸೋಲೇಬರಲಿ,
ಅವಮಾನವೇ ಬರಲಿ, ಇದನ್ನು ಮೀರಿ
ಗಟ್ಟಿಯಾಗಿ ನಿಂತು ಉತ್ಸಾಹದಿಂದ
ಇರೋದೆ ಜೀವನ. ಸೂರ್ಯ ಚಂದ್ರರಂತೆ
ಮನುಷ್ಯ ಪ್ರಪಂಚದ ಯುದ್ಧದಲ್ಲಿ
ಏಕಾಂಗಿಯಾಗಿ ಹೋರಾಡಿ, ಬದುಕುವುದೇ
ನಿಜ ಜೀವನ.

–ಅಭಿನವ ಗವಿ ಸಿದ್ದೇಶ್ವರ ಸ್ವಾಮೀಜಿ ಕೊಪ್ಪಳ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ರಾಜ್ಯದಲ್ಲಿ ಬಿಸಿತುಪ್ಪವಾದ ಗ್ಯಾರಂಟಿಗಳು, ಸಾಲು ಸಾಲು ಬೆಲೆ ಏರಿಕೆಗೆ ಭಾರಿ ಜನಾಕ್ರೋಶ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಒಂದೆಡೆ ಕಲ್ಯಾಣ ರಾಜ್ಯದ ಕನಸು ಬಿತ್ತಿ ಗ್ಯಾರಂಟಿ ಯೋಜನೆಗಳ ಮೂಲಕ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಆಸರೆಯಾಗಲು ಹೊರಟಿರುವ ರಾಜ್ಯ ಸರ್ಕಾರ, ಮತ್ತೊಂದೆಡೆ ದಿನೋಪಯೋಗಿ ವಸ್ತುಗಳು ಹಾಗೂ ಸಾರ್ವಜನಿಕ ಸೇವೆಗಳ ದರವನ್ನು ಸತತವಾಗಿ ಏರಿಕೆ ಮಾಡುತ್ತಿರುವುದು ಜನಸಾಮಾನ್ಯರ ಆಕ್ರೋಶಕ್ಕೆ ಕಾರಣವಾಗಿದೆ.



ನವೆಂಬರ್ ತಿಂಗಳ ಆರಂಭದಿಂದಲೇ ಸಾಲು ಸಾಲು ಬೆಲೆ ಏರಿಕೆಗಳ ಬಿಸಿ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಿದ್ದು, ರಾಜ್ಯದ ಜನತೆ ಅಕ್ಷರಶಃ ದುಬಾರಿ ದುನಿಯಾದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಾಲು ದರ ಏರಿಕೆ : ರಾಜ್ಯದಲ್ಲಿ ನವೆಂಬರ್ 1ರಿಂದಲೇ ಜಾರಿಗೆ ಬರುವಂತೆ ಪ್ರತಿ ಲೀಟರ್ ಹಾಲಿನ ದರವನ್ನು 8 ರೂಪಾಯಿಗಳವರೆಗೆ ಏರಿಕೆ ಮಾಡುವ ತೀರ್ಮಾನವು ಹೈನುಗಾರರಿಗೆ ತುಸು ನೆಮದಿ ನೀಡಿದರೂ, ಗ್ರಾಹಕರ ಜೇಬಿಗೆ ದೊಡ್ಡ ಹೊರೆಯಾಗಿ ಪರಿಣಮಿಸಿದೆ. ಈಗಾಗಲೇ ತರಕಾರಿ, ಅಡುಗೆ ಎಣ್ಣೆ, ಅನಿಲ ಹಾಗೂ ಇಂಧನ ಬೆಲೆಯಿಂದ ಕಂಗೆಟ್ಟಿರುವ ಜನರಿಗೆ ಹಾಲಿನ ದರ ಏರಿಕೆಯು ಬಿಸಿ ತುಪ್ಪವಾಗಿ ಪರಿಣಮಿಸಿದೆ. ಬಸ್ ಪ್ರಯಾಣ ದರ ಹೆಚ್ಚಳದ ಭೀತಿ : ಇಂಧನ ಬೆಲೆ ಏರಿಕೆ ಹಾಗೂ ಸಾರಿಗೆ ನಿಗಮಗಳ ನಷ್ಟದ ನೆಪವೊಡ್ಡಿ ನವೆಂಬರ್ 4ರಿಂದ ಸಾರಿಗೆ ಬಸ್ ಪ್ರಯಾಣ ದರವನ್ನು ಹೆಚ್ಚಿಸುವ ಸಾಧ್ಯತೆ ದಟ್ಟವಾಗಿದೆ.

ಕೆಎಸ್‌ಆರ್‌ಟಿಸಿ ಹಾಗೂ ಇತರೆ ಸಾರಿಗೆ ಸಂಸ್ಥೆಗಳು ದರ ಪರಿಷ್ಕರಣೆಗೆ ಸರ್ಕಾರದ ಮುಂದೆ ಪ್ರಸ್ತಾವನೆ ಸಲ್ಲಿಸಿದ್ದು, ಬಸ್ ಪ್ರಯಾಣ ದರ ಏರಿಕೆಯಾದರೆ ನಿತ್ಯ ಕೆಲಸಕ್ಕೆ ತೆರಳುವ ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಬಡ ವರ್ಗದ ಜನರಿಗೆ ದೊಡ್ಡ ಆಘಾತವಾಗಲಿದೆ. ತಿಂಡಿ, ಕಾಫಿ, ಟೀ ದರ ಕೂಡ ಅಧಿಕ : ಹಾಲಿನ ದರ ಹಾಗೂ ಸಾರಿಗೆ ವೆಚ್ಚ ಹೆಚ್ಚಾಗುತ್ತಿದ್ದಂತೆ, ಇದರ ನೇರ ಪರಿಣಾಮ ಹೋಟೆಲ್ ಉದ್ಯಮದ ಮೇಲೆ ಬೀರಿದೆ. ಹೋಟೆಲ್ ಹಾಗೂ ಉಪಾಹಾರ ಮಂದಿರಗಳಲ್ಲಿ ಕಾಫಿ, ಟೀ, ತಿಂಡಿ ಮತ್ತು ಊಟದ ಬೆಲೆಗಳು ಗಗನಕ್ಕೇರುವ ಸಂಭವವಿದ್ದು, ದಿನನಿತ್ಯ ಹೋಟೆಲ್ ಅವಲಂಬಿಸಿರುವ ಮಧ್ಯಮ ವರ್ಗದ ನೌಕರರು ಹಾಗೂ ವಿದ್ಯಾರ್ಥಿಗಳ ತಿಂಗಳು ಅಂತ್ಯದ ಬಜೆಟ್ ಸಂಪೂರ್ಣ ಅಸ್ತವ್ಯಸ್ತಗೊಳ್ಳಲಿದೆ.

ಗ್ಯಾರಂಟಿ ಯೋಜನೆಗಳ ಲಾಭ ಒಂದೆಡೆ, ಬೆಲೆ ಏರಿಕೆಯ ಹೊರೆ ಮತ್ತೊಂದೆಡೆ! : ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಮತ್ತು ಯುವನಿಧಿ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಗಳಿಂದ ಲಕ್ಷಾಂತರ ಕುಟುಂಬಗಳಿಗೆ ಆರ್ಥಿಕ ನೆರವು ಸಿಗುತ್ತಿದೆ. ಅದರಲ್ಲೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಹಾಗೂ ಕುಟುಂಬದ ಮಹಿಳಾ ಮುಖ್ಯಸ್ಥ–ರಿಗೆ ಮಾಸಿಕ ಹಣಕಾಸಿನ ನೆರವು ದೊರೆಯುತ್ತಿದೆ.

ಆದರೆ ಮತ್ತೊಂದೆಡೆ ಹಾಲಿನ ದರ ಏರಿಕೆ, ಸಾರಿಗೆ ದರ ಪರಿಷ್ಕರಣೆಯ ಪ್ರಸ್ತಾಪ ಮತ್ತು ಹೋಟೆಲ್ ಆಹಾರ ಪದಾರ್ಥಗಳ ಬೆಲೆ ಹೆಚ್ಚಳದ ಸಾಧ್ಯತೆ ಜನರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.ಸರ್ಕಾರ ಒಂದು ಕೈಯಲ್ಲಿ ಹಣ ನೀಡುತ್ತಾ ಮತ್ತೊಂದು ಕೈಯಲ್ಲಿ ಬೆಲೆ ಏರಿಕೆಯ ಮೂಲಕ ಅದಕ್ಕಿಂತ ಹೆಚ್ಚಿನ ಹಣವನ್ನು ಜನ–ರಿಂದ ವಸೂಲಿ ಮಾಡುತ್ತಿದೆಯೇ ಎಂಬ ಪ್ರಶ್ನೆಯೂ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ರಾಜ್ಯದಲ್ಲಿ ಹಾಲಿನ ದರವನ್ನು 2025ರ ಮಾರ್ಚ್‌ನಲ್ಲಿ ಪ್ರತಿ ಲೀಟರ್‌ಗೆ 4 ಹೆಚ್ಚಿಸಲಾಗಿತ್ತು. ಅದಕ್ಕೂ ಮೊದಲು 2024ರ ಜೂನ್‌ನಲ್ಲಿ ಹಾಲಿನ ಪ್ಯಾಕೆಟ್ ಪ್ರಮಾಣದ ಬದಲಾವಣೆಯೊಂದಿಗೆ ದರ ಪರಿಷ್ಕರಣೆಯಾಗಿ–ತ್ತು. ಇದೀಗ ಮತ್ತೆ 8ರಷ್ಟು ಹೆಚ್ಚಳವಾಗುತ್ತಿರುವುದು ಗ್ರಾಹಕರಿಗೆ ದೊಡ್ಡ ಹೊರೆಯಾಗಿದೆ. ಇದೇ ರೀತಿ ಸಾರಿಗೆ ದರವನ್ನು 2025ರಲ್ಲಿ ಶೇ.15ರಷ್ಟು ಹೆಚ್ಚಿಸಲಾಗಿತ್ತು. ಈ ಹಿಂದಿನ ದರ ಏರಿಕೆಗಳ ಪರಿಣಾಮ ಜನರ ದಿನನಿತ್ಯದ ಖರ್ಚಿನಲ್ಲಿ ಈಗಾಗಲೇ ಕಾಣಿಸಿಕೊಳ್ಳುತ್ತಿರುವಾಗ ಮತ್ತೊಂದು ಸುತ್ತಿನ ಏರಿಕೆಯ ಪ್ರಸ್ತಾಪ ಆತಂಕ ಮೂಡಿಸಿದೆ.

ಸರ್ಕಾರದ ಈ ಸರಣಿ ಬೆಲೆ ಏರಿಕೆಯ ತೀರ್ಮಾನದ ವಿರುದ್ಧ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಒಂದು ಕಡೆ ಗ್ಯಾರಂಟಿ ಯೋಜನೆಗಳ ಮುಖಾಂತರ ಉಚಿತ ಸೌಲಭ್ಯಗಳನ್ನು ನೀಡಿ ಜನಪ್ರಿಯತೆ ಗಳಿಸುತ್ತಿರುವ ಸರ್ಕಾರ, ಮತ್ತೊಂದು ಕಡೆ ಪರೋಕ್ಷವಾಗಿ ಇಂಧನ, ಹಾಲು, ಸಾರಿಗೆ ಹಾಗೂ ಅಗತ್ಯ ವಸ್ತುಗಳ ಬೆಲೆಗಳನ್ನು ವಿಪರೀತವಾಗಿ ಹೆಚ್ಚಿಸಿ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಿದೆ ಎಂದು ಸಾರ್ವಜನಿಕರು ಹಾಗೂ ವಿರೋಧ ಪಕ್ಷಗಳು ತೀವ್ರವಾಗಿ ಖಂಡಿಸುತ್ತಿವೆ.

ಬರುವ ದಿನಗಳಲ್ಲಿ ಸರ್ಕಾರವು ಈ ಬೆಲೆ ಏರಿಕೆಗಳ ಕುರಿತು ಮರುಚಿಂತನೆ ನಡೆಸಿ, ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳದಿದ್ದರೆ, ಜನಸಾಮಾನ್ಯರ ಆಕ್ರೋಶ ಮತ್ತಷ್ಟು ಉಲ್ಬಣಗೊಳ್ಳುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿವೆ.

ಬೆಲೆ ನಿಯಂತ್ರಣವೂ ಇರಲಿ : ಸರ್ಕಾರ ಯಾವುದೇ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿದರೂ ಅದರ ಅಂತಿಮ ಉದ್ದೇಶ ಜನರ ಜೀವನಮಟ್ಟ ಸುಧಾರಿಸುವುದಾಗಿರಬೇಕು. ರೈತರಿಗೆ ನ್ಯಾಯಯುತ ಬೆಲೆ ನೀಡುವುದು, ಸಾರಿಗೆ ಸಂಸ್ಥೆಗಳನ್ನು ನಷ್ಟದಿಂದ ಹೊರತರುವುದು ಹಾಗೂ ಹಾಲು ಉತ್ಪಾದಕರ ಹಿತ ಕಾಯುವುದು ಅಗತ್ಯವೇ ಸರಿ. ಆದರೆ ಅದೇ ಸಮಯದಲ್ಲಿ ಗ್ರಾಹಕರ ಮೇಲಿನ ಹೊರೆಯನ್ನು ನಿಯಂತ್ರಿಸುವ ಹೊಣೆಗಾರಿಕೆಯೂ ಸರ್ಕಾರದ ಮೇಲಿದೆ.

ಗ್ಯಾರಂಟಿ ಯೋಜನೆಗಳ ಮೂಲಕ ಜನರಿಗೆ ನೆರವು ನೀಡುತ್ತಿರುವ ಸರ್ಕಾರ, ಬೆಲೆ ಏರಿಕೆಯ ಹೊರೆ ಕಡಿಮೆ ಮಾಡುವಲ್ಲಿಯೂ ತನ್ನ ಜವಾಬ್ದಾರಿ ನಿಭಾಯಿಸಬೇಕಿದೆ. ಇಲ್ಲದಿದ್ದರೆ ಜನ–ರಿಗೆ ಸಿಗುವ ಸೌಲಭ್ಯಗಳ ಲಾಭವನ್ನು ದಿನನಿತ್ಯದ ಬೆಲೆ ಏರಿಕೆಯೇ ನುಂಗಿಹಾಕುವ ಪರಿಸ್ಥಿತಿ ನಿರ್ಮಾಣವಾಗಬಹುದು. ಜನರ ಪಾಲಿಗೆ ಗ್ಯಾರಂಟಿಗಳ ಸಂತೋಷಕ್ಕಿಂತ ದುಬಾರಿ ದುನಿಯಾದ ಸಂಕಷ್ಟವೇ ದೊಡ್ಡದಾಗುವ ಆತಂಕ ಎದುರಾಗಿದೆ.

ಕ್ರಿಪ್ಟೋ ಕರೆನ್ಸಿಯ ಅತಿದೊಡ್ಡ ದರೋಡೆ.. ಬೈನಾನ್ಸ್ $6.3 ಬಿಲಿಯನ್ ಹ್ಯಾಕ್..

❏ ನೈಜ್ಯ ದೆಸೆ ನ್ಯೂಸ್

ನವದೆಹಲಿ: ವಿಶ್ವದ ಅತಿದೊಡ್ಡ ಕ್ರಿಪ್ಟೋಕರೆನ್ಸಿ ವಿನಿಮಯ ವೇದಿಕೆಯಾದ ಬೈನಾನ್ಸ್ ಗೆ ಭಾರೀ ಸೈಬರ್ ಭದ್ರತಾ ಉಲ್ಲಂಘನೆಯಾಗಿರುವ ಶಂಕೆ ವ್ಯಕ್ತವಾಗಿದೆ. ಹ್ಯಾಕರ್‌ಗಳು ಕಂಪನಿಯ ವ್ಯವಸ್ಥೆಗೆ ಅನಧಿಕೃತವಾಗಿ ಪ್ರವೇಶಿಸಿ ಸುಮಾರು 6.3 ಬಿಲಿಯನ್ ಡಾಲರ್ (ಅಂದಾಜು 56 ಸಾವಿರ ಕೋಟಿ ರೂ.) ಮೌಲ್ಯದ ಕ್ರಿಪ್ಟೋ ಸ್ವತ್ತುಗಳಿಗೆ ಅಪಾಯ ಉಂಟುಮಾಡಿದ್ದಾರೆ ಎಂದು ವರದಿಯಾಗಿದೆ.



ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಬೈನಾನ್ಸ್ ತನ್ನ ವೇದಿಕೆಯಲ್ಲಿ ಠೇವಣಿ ಮತ್ತು ಹಣ ಹಿಂಪಡೆಯುವಿಕೆ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಡೆವಲಪರ್ ಲ್ಯಾಪ್ಟಾಪ್‌ನಿಂದ ಹ್ಯಾಕ್: ಬೈನಾನ್ಸ್ ನ ಪ್ರಾಥಮಿಕ ತನಿಖೆಯ ಪ್ರಕಾರ, ಕಂಪನಿಯ ಡೆವಲಪ್?ಸ ಎಂಜಿನಿಯರ್ ಒಬ್ಬರ ಲ್ಯಾಪ್ಟಾಪ್ ಹ್ಯಾಕರ್‌ಗಳ ನಿಯಂತ್ರಣಕ್ಕೆ ಸಿಲುಕಿರುವ ಸಾಧ್ಯತೆಯಿದೆ. ಇದರ ಮೂಲಕ ಹ್ಯಾಕರ್‌ಗಳು ಕಂಪನಿಯ ಸರ್ವರ್‌ನಲ್ಲಿರುವ ಸೇವಾ ವ್ಯವಸ್ಥೆಗೆ ಪ್ರವೇಶ ಪಡೆದು ಅನಧಿಕೃತ ಹಣ ವರ್ಗಾವಣೆ ವಹಿವಾಟುಗಳನ್ನು ನಡೆಸಿರಬಹುದು ಎಂದು ಶಂಕಿಸಲಾಗಿದೆ.

ಬಳಕೆದಾರರ ಕ್ರಿಪ್ಟೋ ವ್ಯಾಲೆಟ್‌ಗಳ ಖಾಸಗಿ ಕೀಗಳು ಸೋ–ರಿಕೆಯಾಗಿರುವುದಕ್ಕೆ ಯಾವುದೇ ಪುರಾವೆ ಸಿಕ್ಕಿಲ್ಲ ಎಂದು ಕಂಪನಿ ಸ್ಪಷ್ಟಪಡಿಸಿದೆ.

3 ಬಿಲಿಯನ್ ಡಾಲರ್ ಮೌಲ್ಯದ ಆಸ್ತಿ ಫ್ರೀಜ್ : ಘಟನೆಯ ಬೆನ್ನಲ್ಲೇ ಬ್ಲಾಕ್‌ಚೈನ್ ಪಾಲುದಾರರ ಸಹಕಾರದೊಂದಿಗೆ ಸುಮಾರು 3 ಬಿಲಿಯನ್ ಡಾಲರ್ ಮೌಲ್ಯದ ಕ್ರಿಪ್ಟೋ ಕರೆನ್ಸಿಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಬೈನಾನ್ಸ್ ತಿಳಿಸಿದೆ. ಉಳಿದ ಆಸ್ತಿಗಳ ಪತ್ತೆ ಮತ್ತು ಮರುಪಡೆಯುವ ಕಾರ್ಯ ಮುಂದುವರಿದಿದೆ. ಬಳಕೆದಾರರಿಗೆ ಯಾವುದೇ ನಷ್ಟವಾಗದಂತೆ ಕಂಪನಿಯ ಖಂಈಗ ತುರ್ತು ನಿಧಿ ಹಾಗೂ ಸ್ವಂತ ಹಣದಿಂದ ಸಂಪೂರ್ಣ ನಷ್ಟವನ್ನು ಭರಿಸುವುದಾಗಿಯೂ ಭರವಸೆ ನೀಡಿದೆ.

ಟೆಥರ್, ಸರ್ಕಲ್‌ನಿಂದಲೂ ಕ್ರಮ : ಬೈನಾನ್?ಸ ಮೇಲಿನ ದಾಳಿಯ ಬೆನ್ನಲ್ಲೇ ಪ್ರಮುಖ ಕ್ರಿಪ್ಟೋಕರೆನ್ಸಿ ಸಂಸ್ಥೆಗಳಾದ ಟೆಥರ್ ಮತ್ತು ಸರ್ಕಲ್ ಕೂಡ ಕ್ರಮ ಕೈಗೊಂಡಿವೆ. ಟೆಥರ್ ಸುಮಾರು 1.55ರಿಂದ 1.6 ಬಿಲಿಯನ್ ಡಾಲರ್ ಮೌಲ್ಯದ ಕ್ರಿಪ್ಟೋ ಕರೆನ್ಸಿಗಳನ್ನು ಸ್ಥಗಿತಗೊಳಿಸಿದ್ದರೆ, ಸರ್ಕಲ್ 800 ಮಿಲಿಯನ್ ಡಾಲರ್‌ಗೂ ಅಧಿಕ ಮೌಲ್ಯದ ಆಸ್ತಿಗಳನ್ನು ಫ್ರೀಜ್ ಮಾಡಿದೆ ಎಂದು ವರದಿಯಾಗಿದೆ.

ಕ್ರಿಪ್ಟೋ ಮಾರುಕಟ್ಟೆಯಲ್ಲಿ ತಲ್ಲಣ : ಸೈಬರ್ ದಾಳಿಯ ಸುದ್ದಿ ಹೊರಬೀಳುತ್ತಿದ್ದಂತೆ ಕ್ರಿಪ್ಟೋ ಮಾರುಕಟ್ಟೆಯಲ್ಲಿ ಆತಂಕ ಉಂಟಾಗಿದೆ. ಬಿಟ್ ಕಾಯಿನ್ ಮೌಲ್ಯ ಶೇ.3.2ರಿಂದ ಶೇ.5ರವರೆಗೆ ಕುಸಿದು ಒಂದು ಹಂತದಲ್ಲಿ 77 ಸಾವಿರ ಡಾಲರ್‌ಗಿಂತ ಕೆಳಕ್ಕೆ ಇಳಿದಿದೆ. ಎಥೆರಿಯಂ ಮತ್ತು ಸೋಲಾನಾ ಸೇರಿದಂತೆ ಇತರ ಪ್ರಮುಖ ಕ್ರಿಪ್ಟೋಕರೆನ್ಸಿಗಳ ಮೌಲ್ಯದಲ್ಲೂ ಇಳಿಕೆ ಕಂಡುಬಂದಿದೆ.

ಘಟನೆಯ ಕುರಿತು ಸಮಗ್ರ ತನಿಖೆ ನಡೆಸಲಾಗುತ್ತಿದ್ದು, ಹಣದ ಚಲನವಲನ ಪತ್ತೆಹಚ್ಚಲು ಕಾನೂನು ಜಾರಿ ಸಂಸ್ಥೆಗಳು ಹಾಗೂ ಬ್ಲಾಕ್‌ಚೈನ್ ಗುಪ್ತಚರ ಸಂಸ್ಥೆಗಳ ನೆರವು ಪಡೆಯಲಾಗುತ್ತಿದೆ. ತನಿಖೆ ಪೂರ್ಣಗೊಂಡ ಬಳಿಕ ದಾಳಿಯ ತಾಂತ್ರಿಕ ವಿವರಗಳನ್ನು ಬಹಿರಂಗಪಡಿಸುವುದಾಗಿ ಬೈನಾನ್ಸ್ ತಿಳಿಸಿದೆ. ಒಟ್ಟಿನಲ್ಲಿ, ಒಬ್ಬ ಉದ್ಯೋಗಿಯ ಲ್ಯಾಪ್ಟಾಪ್‌ನಲ್ಲಿನ ಭದ್ರತಾ ಲೋಪವೇ ಜಾಗತಿಕ ಕ್ರಿಪ್ಟೋ ವಹಿವಾಟು ವ್ಯವಸ್ಥೆಗೆ ಭಾರೀ ಅಪಾಯ ತಂದೊಡ್ಡಿರುವ ಸಾಧ್ಯತೆ ಈ ಘಟನೆ ಮೂಲಕ ಮತ್ತೆ ಸಾಬೀತಾಗಿದೆ.

ಶ್ರೀ ಮಹಾರಾಣಾ ಪ್ರತಾಪ್ ಸಿಂಹರ ಮೂರ್ತಿ ಲೋಕಾರ್ಪಣೆಗೆ ಸರ್ವ ಸಮಾಜದ ಸಹಕಾರಕ್ಕೆ ಮನವಿ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ನವೆಂಬರ್ 15ರಂದು ರಜಪೂತ ಸಮಾಜದ ನೇತೃತ್ವದಲ್ಲಿ ವೀರ ಶಿರೋಮಣಿ ಶ್ರೀ ಮಹಾರಾಣಾ ಪ್ರತಾಪ್ ಸಿಂಹರ ಮೂರ್ತಿ ಲೋಕಾರ್ಪಣೆ ಸಮಾರಂಭ ನಡೆಯಲಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಉದ್ದೇಶದಿಂದ ಪಟ್ಟಣದ ವಿವಿಧ ಸಮಾಜಗಳ ಮುಖಂಡರ ಪೂರ್ವಭಾವಿ ಸಭೆ ಗುರುವಾರ ಸಂಜೆ ಸ್ಥಳೀಯ ಶ್ರೀ ಕಾಳಿಕಾ ದೇವಿ ದೇವಸ್ಥಾನದಲ್ಲಿ ಜರುಗಿತು.



ಸಭೆಯ ಸಾನಿಧ್ಯ ವಹಿಸಿದ್ದ ಪರಮಪೂಜ್ಯ ಸಿದ್ದಲಿಂಗ ದೇವರು ಮಾತನಾಡಿ, ರಜಪೂತ ಸಮಾಜದ ವತಿಯಿಂದ ಹಮ್ಮಿಕೊಳ್ಳಲಾಗಿರುವ ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಪಟ್ಟಣದ ಎಲ್ಲ ಸಮಾಜಗಳ ಮುಖಂಡರು ಹಾಗೂ ಸಾರ್ವಜನಿಕರು ಕೈಜೋಡಿಸಿ ಸಹಕಾರ ನೀಡಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಮುಸ್ಲಿಂ ಸಮಾಜದ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹಮದ್ ಖಾಜಿ, ಸಮಾಜದ ಪ್ರಮುಖರಾದ ವಿರೂಪಾಕ್ಷಯ್ಯ ಹಿರೇಮಠ, ಡಾ. ವಿಜಯಕುಮಾರ ಕಾರ್ಚಿ, ಬಕ್ಷಿ ಬಾಳು, ಕಾಶಿನಾಥ ಮುರಾಳ ಹಾಗೂ ಪತ್ರಕರ್ತ ಜಿ.ಟಿ. ಘೋರ್ಪಡೆ ಮಾತನಾಡಿ, ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಸಭೆಯಲ್ಲಿ ಲೋಕಾರ್ಪಣಾ ಸಮಾರಂಭದ ಆಮಂತ್ರಣ ಪತ್ರಿಕೆ, ಬಿತ್ತಿಪತ್ರ ಹಾಗೂ ಕರಪತ್ರಗಳನ್ನು ಬಿಡುಗಡೆಗೊಳಿಸಲಾಯಿತು.

ಸಭೆಯಲ್ಲಿ ದಲಿತ ಸಮಾಜದ ಮುಖಂಡ ಹಾಗೂ ನಿವೃತ್ತ ಪೊಲೀಸ್ ವ–ರಿಷ್ಠಾಧಿಕಾರಿ ಎಸ್.ಬಿ. ಕಟ್ಟಿಮನಿ, ವಿಶ್ವಕರ್ಮ ಸಮಾಜದ ಅಧ್ಯಕ್ಷ ಶ್ರೀನಿವಾಸ ಸೋನಾರ, ಮರಾಠಾ ಸಮಾಜದ ಅಧ್ಯಕ್ಷ ಸಂಭಾಜಿ–ರಾವ್ ವಾಡ್ಕರ್, ರಜಪೂತ ಸಮಾಜದ ಹಿರಿಯರಾದ ಬಾಲಾಜಿಸಿಂಗ್ ಹಜೇರಿ, ಆರ್ಯವೈಶ್ಯ ಸಮಾಜದ ವಾಸುದೇವ ಹೆಬಸೂರ, ಬಣಜಿಗ ಸಮಾಜದ ಮುರಿಗೆಪ್ಪ ಸರಶೆಟ್ಟಿ, ದಲಿತ ಸಮಾಜದ ಮುಖಂಡ ಮುತ್ತಪ್ಪ ಚಮಲಾಪೂರ, ಭಾವಸಾರ ಕ್ಷತ್ರಿಯ ಸಮಾಜದ ಹಂಚಾಟೆ, ಮಾದರ ಸಮಾಜದ ಮುಖಂಡ ರಾಮಣ್ಣ ಕಟ್ಟಿಮನಿ, ರಜಪೂತ ಸಮಾಜದ ಅಧ್ಯಕ್ಷ ಹರಿಸಿಂಗ್ ಮೂಲಿಮನಿ, ಉಪಾಧ್ಯಕ್ಷ ರತನಸಿಂಗ್ ಕೊಕಟನೂರ, ಬ್ರಾಹ್ಮಣ ಸಮಾಜದ ರಮೇಶ ಕುಲಕರ್ಣಿ, ಸಜ್ಜನ ಸಮಾಜದ ಕಾಶಿನಾಥ ಸಜ್ಜನ ಸೇರಿದಂತೆ ವಿವಿಧ ಸಮಾಜಗಳ ಮುಖಂಡರು ಹಾಗೂ ರಜಪೂತ ಸಮಾಜದ ಬಾಂಧವರು ಉಪಸ್ಥಿತರಿದ್ದರು. ಸಿಆರ್‌ಸಿ ರಾಜು ವಿಜಾಪುರ ಕಾರ್ಯಕ್ರಮ ನಿರೂಪಿಸಿದರು.

ರೋಟರಿ ಕ್ಲಬ್‌ನಿಂದ 20 ಬಡ ವಿದ್ಯಾರ್ಥಿನಿಯರಿಗೆ ಸೈಕಲ್ ವಿತರಣೆ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಶಿಕ್ಷಣಕ್ಕೆ ಉತ್ತೇಜನ ನೀಡುವ ಹಾಗೂ ಬಡ ವಿದ್ಯಾರ್ಥಿಗಳ ಪ್ರಯಾಣದ ತೊಂದರೆ ನಿವಾರಿಸುವ ಉದ್ದೇಶದಿಂದ ಪಟ್ಟಣದ ವಿಠ್ಠಲ ಮಂದಿರದಲ್ಲಿ ರೋಟರಿ ಕ್ಲಬ್ ವತಿಯಿಂದ ವಿವಿಧ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ 20 ವಿದ್ಯಾರ್ಥಿಗಳಿಗೆ ಬುಧವಾರ ಸೈಕಲ್‌ಗಳನ್ನು ವಿತರಿಸಲಾಯಿತು.



ವಿತರಿಸಲಾದ ಸೈಕಲ್‌ಗಳಲ್ಲಿ 18 ಬಾಲಕಿಯರು ಹಾಗೂ ಇಬ್ಬರು ಬಾಲಕರು ಫಲಾನುಭವಿಗಳಾಗಿದ್ದರು. ಈ ಸಂದರ್ಭದಲ್ಲಿ ರೋಟರಿ ಕ್ಲಬ್ ಅಧ್ಯಕ್ಷ ಘನಶ್ಯಾಮ ಚವಾಣ ಮಾತನಾಡಿ, ವಿದ್ಯಾರ್ಥಿಗಳು ಶಾಲೆಗೆ ತೆರಳಲು ಅನುಕೂಲವಾಗುವಂತೆ ನೀಡಲಾಗಿರುವ ಸೈಕಲ್‌ಗಳನ್ನು 8ರಿಂದ 10ನೇ ತರಗತಿವರೆಗೆ ಮೂರು ವರ್ಷಗಳ ಕಾಲ ಬಳಸಿಕೊಳ್ಳಬಹುದು. ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಉತ್ತಮವಾಗಿ ವಿದ್ಯಾಭ್ಯಾಸ ಮಾಡಿ ಉನ್ನತ ಸಾಧನೆ ಮಾಡುವ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಹಾರೈಸಿದರು.

ರೋಟರಿಯ ಹಿರಿಯ ಸದಸ್ಯರಾದ ಡಾ.ವಿ.ಎಸ್. ಕಾರ್ಚಿ ಹಾಗೂ ಎಸ್.ಕೆ. ಬಾಲಕಿಯರ ಪ್ರೌಢಶಾಲೆಯ ಉಪಪ್ರಾಂಶುಪಾಲ ಅನಿಲಕುಮಾರ ಇರಜ ಮಾತನಾಡಿ, ರೋಟರಿ ಸಂಸ್ಥೆಯು ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೈಗೊಳ್ಳುತ್ತಿರುವ ಸಮಾಜಮುಖಿ ಕಾರ್ಯಗಳ ಕುರಿತು ವಿವರಿಸಿದರು. ಈ ಸಂದರ್ಭದಲ್ಲಿ ರೋಟರಿ ಕಾರ್ಯದರ್ಶಿ ಶ್ಯಾಮ ಹಂಚಾಟೆ, ಖಜಾಂಚಿ ಬಸವರಾಜ ಕುಂಬಾರ, ಎಂ.ಆರ್. ಕತ್ತಿ, ಪ್ರಭುಗೌಡ ಮದರಕಲ್ಲ, ಡಾ.ಎ.ಎ. ನಾಲಬಂದ, ಡಾ.ಆನಂದ ಭಟ್, ಶ್ರೀನಿವಾಸ ಸೋನಾರ, ಸಿ.ಎಸ್. ಮಾಳಿ, ಅಶೋಕ ಬಳಗಾನೂರ, ಎಂ.ಎಸ್. ನಾಗರಾಳ, ಸಂಜೀವಕುಮಾರ ಹಜೇರಿ, ಸುಭಾಸ ಬಬಲೇಶ್ವರ, ರಾಜು ಸಜ್ಜನ, ಎಂ.ಬಿ. ಮಡಿವಾಳರ, ವಿದ್ಯಾರ್ಥಿಗಳ ಪಾಲಕರು ಸೇರಿದಂತೆ ಇತರರು ಉಪಸ್ಥಿತರಿದ್ದರು. ಸಂಗಮೇಶ ಪಾಲ್ಕಿ ಕಾರ್ಯಕ್ರಮ ನಿರ್ವಹಿಸಿದರು.

ಸಾಹಿತ್ಯ ಸಿಂಚನ

ಭೂರಮೆ

ಹೇ ತಾಯಿಯೇ!..
ಭೂ ಮಾತೆಯೇ!..
ನಮ್ಮಾ ಜೀವಧಾತ್ರಿಯೇ!..
ನಮ್ಮಾ ಜೀವಧಾತ್ರಿಯೇ!..

ಎಂಥಾ ವಿಸ್ಮಯ ನಿನ್ನಯ ಒಡಲು!
ಜೀವಕ್ಕಾಸರೆ ನಿನ್ನಯ ಮಡಿಲು!
ತುಂಬಿ ತುಳುಕುತ್ತಿದೆ ನಿನ್ನೊಳು,
ಅಮೃತದಾ, ಸವಿಜೇನ ಕಡಲು.

ಗಿರಿ–ಪರ್ವತಗಳ ಸೃಷ್ಟಿಸಿರುವೆ,
ಸಾಹಸಿಗಳ ನಿದ್ದೆಗೆಡಿಸಿರುವೆ;
ಹಚ್ಚ–ಹಸಿರ ಹರಡಿರುವೆ,
ಸೌಂದರ್ಯವ ನೀ ಸೂಸಿರುವೆ!

ಜಲವ ಹೊತ್ತು ನಿಂತಿರುವೆ,
ಜೀವಿಗಳ ಜೀವ ಹಿಡಿದಿರುವೆ;
ಜಲಪಾತದ ಸೊಬಗ ಕರುಣಿಸಿ
ಜನಮನವ ನೀ ತಣಿಸಿರುವೆ.

ಹಸಿರ ನೀನು ಹೊದ್ದಿರಲು,
ಜೀವಿಗಳ ಉಸಿರು ಸಾಗುತಿಹುದು;
ಜೀವ ನೀಡುವ ಮಣ್ಣಿರಲು,
ಸಕಲ ಬದುಕು ಸಾಗುತಿಹುದು.

ಕುದಿಯುವ ಜ್ವಾಲಾಗ್ನಿ ನಿನ್ನೊಳಿದ್ದರೂ,
ಶಾಂತ ಸ್ವರೂಪಿಣಿ ನೀನು.
ಬಿರುಗಾಳಿ, ಭೂಕಂಪ ಭುಗಿಲೆದ್ದರೂ,
ಸಹನಾಮೂರ್ತಿ ತಾಯೆ ನೀನು.

ನಿನ್ನ ಗರ್ಭದಿ ಅವಿತ ಖನಿಜಗಳಿಂದ,
ಅರಳಿವೆ ಮನುಜರ ಮನಗಳು;
ಹೆಕ್ಕಿ ತೆಗೆದು ಸಿದ್ಧಗೊಳಿಸಲು,
ಉರುಳುತ್ತಿವೆ ಬಾಳಿನ ದಿನಗಳು.

ಪಂಚಭೂತಗಳ ನೀ ಕರುಣಿಸಿ,
ಪ್ರಾಣವು ನೆಲೆಸಲು ಕಾರಣಳಾದೆ;
ಸಕಲ ಜೀವರಾಶಿಯ ಬದುಕಿಸಿ,
ಪ್ರತ್ಯಕ್ಷ ದೇವತೆ ನೀನಾದೆ!

ಡಾ ಮಹೇಂದ್ರ ಕುರ್ಡಿ

ಭಾರತದ ಮುಸ್ಲಿಮರೆಲ್ಲರೂ ಮಾಜಿ ದಲಿತರೇ ಸಚಿವ ರಿಜ್ವಾನ್ ಅರ್ಷದ್ ಅವರ ಹೇಳಿಕೆಗೆ ಐತಿಹಾಸಿಕ ಸ್ಪಷ್ಟನೆ ಅಗತ್ಯ: ಶೇಕ್ ಫರೀದ್ ಉಮಾರಿ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ಕರ್ನಾಟಕ ಸರ್ಕಾರದ ಸಚಿವರಾದ ರಿಜ್ವಾನ್ ಅರ್ಷದ್ ಅವರು ಇತ್ತೀಚೆಗೆ ನೀಡಿರುವ ಹೇಳಿಕೆಯಲ್ಲಿ ಭಾರತದ ಮುಸ್ಲಿಮರು ಹಿಂದೆ ದಲಿತ ಸಮುದಾಯಕ್ಕೆ ಸೇರಿದವರಾಗಿದ್ದರು ಮತ್ತು ಮತಾಂತರದ ಮೂಲಕ ಮುಸ್ಲಿಮರಾಗಿದ್ದಾರೆ ಎಂಬರ್ಥದ ಅಭಿಪ್ರಾಯ ವ್ಯಕ್ತಪಡಿಸಿರುವುದು ಹಲವು ಪ್ರಶ್ನೆಗಳಿಗೆ ಕಾರಣವಾಗಿದೆ.

ಇಂತಹ ಹೇಳಿಕೆಗಳು ಒಂದು ವಿಶಾಲ ಸಮುದಾಯದ ಇತಿಹಾಸ, ಧಾರ್ಮಿಕ ಅಸ್ಮಿತೆ ಹಾಗೂ ಸಾಮಾಜಿಕ ಹಿನ್ನೆಲೆಯನ್ನು ಒಳಗೊಂಡಿರುವುದರಿಂದ ಜವಾಬ್ದಾರಿಯುತವಾಗಿ ಮಾತನಾಡುವ ಅಗತ್ಯವಿದೆ ಎಂದು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ರಾಯಚೂರು ಜಿಲ್ಲಾ ಅಧ್ಯಕ್ಷರಾದ ಶೇಕ್ ಫರೀದ್ ಉಮಾರಿ ತಿಳಿಸಿದ್ದಾರೆ. ಭಾರತದ ಇತಿಹಾಸವನ್ನು ಅವಲೋಕಿಸಿದಾಗ ಇಲ್ಲಿನ ಮುಸ್ಲಿಂ ಸಮುದಾಯವು ಒಂದೇ ರೀತಿಯ ಸಾಮಾಜಿಕ ಅಥವಾ ಐತಿಹಾಸಿಕ ಹಿನ್ನೆಲೆಯಿಂದ ರೂಪುಗೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಶತಮಾನಗಳ ಇತಿಹಾಸದಲ್ಲಿ ವಿವಿಧ ಪ್ರದೇಶಗಳು, ಭಾಷೆಗಳು, ಸಂಸ್ಕೃತಿಗಳು, ವಂಶಪಾರಂಪರ್ಯಗಳು ಮತ್ತು ಸಾಮಾಜಿಕ ಹಿನ್ನೆಲೆಗಳಿಂದ ಜನರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾರೆ.

ಹೀಗಿರುವಾಗ ಭಾರತದ ಎಲ್ಲಾ ಮುಸ್ಲಿಮರ ಪೂರ್ವಜರೂ ದಲಿತ ಸಮುದಾಯದವರೇ ಆಗಿದ್ದರು ಅಥವಾ ಎಲ್ಲರೂ ದಲಿತರಿಂದ ಮತಾಂತರಗೊಂಡು ಮುಸ್ಲಿಮರಾದರು ಎಂಬ ರೀತಿಯ ಸಾರ್ವತ್ರಿಕ ಹೇಳಿಕೆ ನೀಡುವುದು ಐತಿಹಾಸಿಕವಾಗಿ ಸಮಂಜಸವಲ್ಲ. ಇಂತಹ ಅಭಿಪ್ರಾಯಗಳಿಗೆ



ಸಮಗ್ರ ಐತಿಹಾಸಿಕ ದಾಖಲೆಗಳು ಮತ್ತು ಪುರಾವೆಗಳ ಆಧಾರ ಇರಬೇಕು.

ಭಾರತದ ಮುಸ್ಲಿಮರ ಇತಿಹಾಸವನ್ನು ಕೇವಲ ಮತಾಂತರದ ದೃಷ್ಟಿಕೋನದಿಂದ ಮಾತ್ರ ನೋಡುವುದು ಕೂಡ ಸರಿಯಾದ ವಿಧಾನವಲ್ಲ. ಭಾರತೀಯ ಉಪಖಂಡದಲ್ಲಿ ಇಸ್ಲಾಂ ಧರ್ಮದ ಪ್ರಸಾರಕ್ಕೆ ವ್ಯಾಪಾರ, ಧಾರ್ಮಿಕ ಬೋಧನೆ, ಸೂಫಿ ಪರಂಪರೆ, ಸಾಮಾಜಿಕ ಸಂಪರ್ಕ ಮತ್ತು ವಿವಿಧ ಐತಿಹಾಸಿಕ ಪ್ರಕ್ರಿಯೆಗಳು ಕಾರಣವಾಗಿವೆ. ಈ ಪ್ರಕ್ರಿಯೆಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗಳಿವೆ. ಆದ್ದರಿಂದ ಒಂದು ಹೇಳಿಕೆಯ ಮೂಲಕ ಇಡೀ ಸಮುದಾಯದ ಮೂಲವನ್ನು ನಿರ್ಧರಿಸುವ ಪ್ರಯತ್ನ ಇತಿಹಾಸದ ಸಂಕೀರ್ಣತೆಯನ್ನು ಕಡೆಗಣಿಸಿದಂತಾಗುತ್ತದೆ.

ದಲಿತ ಸಮುದಾಯದ ಮೇಲೆ ಶತಮಾನಗಳಿಂದ ನಡೆದಿರುವ ಜಾತಿ ಆಧಾರಿತ ಶೋಷಣೆ, ಅಸ್ಪೃಶ್ಯತೆ, ಸಾಮಾಜಿಕ ತಾರತಮ್ಯ ಮತ್ತು ಅನ್ಯಾಯವನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ. ಆ ಸಮುದಾಯಕ್ಕೆ ಸಾಮಾಜಿಕ ನ್ಯಾಯ, ಶಿಕ್ಷಣ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ ಮತ್ತು ಸಂವಿಧಾನಬದ್ಧ ಹಕ್ಕುಗಳು ದೊರೆಯಬೇಕು ಎಂಬುದು ನಮ್ಮ ದೃಢವಾದ ನಿಲುವಾಗಿದೆ. ದಲಿತರು ಮತ್ತು ಮುಸ್ಲಿಮರು ಸೇರಿದಂತೆ ಸಮಾಜದ ಶೋಷಿತ ಹಾಗೂ ಹಿಂದುಳಿದ ವರ್ಗಗಳು ಪರಸ್ಪರ ಗೌರವದೊಂದಿಗೆ ಒಗ್ಗೂಡಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಬೇಕಾಗಿದೆ. ಆದರೆ ಈ ಐಕ್ಯತೆಯು ಯಾವುದೇ ಸಮುದಾಯದ ಇತಿಹಾಸ ಅಥವಾ ಅಸ್ಮಿತೆಯನ್ನು ಮತ್ತೊಂದು ಸಮುದಾಯದೊಂದಿಗೆ ಸಮೀಕರಿಸುವುದರ ಮೇಲೆ ನಿರ್ಮಾಣವಾಗಬಾರದು.

ಇಸ್ಲಾಂ ಧರ್ಮದ ಮೂಲ ತತ್ವವೇ ಮಾನವ ಸಮಾನತೆ ಮತ್ತು ಸಹೋದರತ್ವವಾಗಿದೆ. ಜಾತಿ, ವರ್ಣ, ವಂಶ, ಭಾಷೆ ಅಥವಾ ಜನ್ಮದ ಆಧಾರದ ಮೇಲೆ ಮನುಷ್ಯರ ನಡುವೆ ಶ್ರೇಷ್ಠ–ಕನಿಷ್ಠ ಎಂಬ ಭೇದಭಾವವನ್ನು ಇಸ್ಲಾಂ ಒಪ್ಪುವುದಿಲ್ಲ. ಮನುಷ್ಯರ ಗೌರವ ಮತ್ತು ಶ್ರೇಷ್ಠತೆಯನ್ನು ಅವರ ನೈತಿಕತೆ, ಸತ್ಕರ್ಮ ಮತ್ತು ಧರ್ಮನಿಷ್ಠೆಯ ಆಧಾರದ ಮೇಲೆ ಪರಿಗಣಿಸುತ್ತದೆ. ಆದ್ದರಿಂದ ಮುಸ್ಲಿಮರ ಧಾರ್ಮಿಕ ಅಸ್ಮಿತೆಯನ್ನು ಕೇವಲ ಒಂದು ಸಾಮಾಜಿಕ ವರ್ಗದ ಹಿಂದಿನ ಹಿನ್ನೆಲೆಗೆ ಸೀಮಿತಗೊಳಿಸುವುದು ಸರಿಯಲ್ಲ.

ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಧಾರ್ಮಿಕ ಸ್ವಾತಂತ್ರ್ಯ, ಸಮಾನತೆ ಮತ್ತು ಗೌರವದಿಂದ ಬದುಕುವ ಹಕ್ಕನ್ನು ನೀಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಂದು ಸಮುದಾಯದ ಇತಿಹಾಸ, ನಂಬಿಕೆ ಮತ್ತು ಅಸ್ಮಿತೆಯನ್ನು ಗೌರವಿಸುವುದು ಎಲ್ಲ ಸಾರ್ವಜನಿಕ ಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ವಿಶೇಷವಾಗಿ ಸಚಿವ ಸ್ಥಾನದಲ್ಲಿರುವವರು ಸಮಾಜದ ವಿವಿಧ ಸಮುದಾಯಗಳ ಬಗ್ಗೆ ಮಾತನಾಡುವಾಗ ಇತಿಹಾಸದ ನಿಖರತೆ ಮತ್ತು ಪದಗಳ ಬಳಕೆಯಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಬೇಕು.

ಸಚಿವರಾದ ರಿಜ್ವಾನ್ ಅರ್ಷದ್ ಅವರು ತಮ್ಮ ಹೇಳಿಕೆಗೆ ಸಂಬಂಧಿಸಿದಂತೆ ಯಾವ ಐತಿಹಾಸಿಕ ಅಧ್ಯಯನ ಅಥವಾ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ ಎಂಬುದನ್ನು ಸಾರ್ವಜನಿಕವಾಗಿ ಸ್ಪಷ್ಟಪಡಿಸಬೇಕು. ಅವರ ಉದ್ದೇಶ ದಲಿತರು ಮತ್ತು ಮುಸ್ಲಿಮರ ನಡುವೆ ಸಾಮಾಜಿಕ ಐಕ್ಯತೆ ಹಾಗೂ ಸಹೋದರತ್ವವನ್ನು ಬೆಳೆಸುವುದಾಗಿದ್ದರೆ, ಅದನ್ನು ಸ್ವಾಗತಿಸುತ್ತೇವೆ. ಆದರೆ ಆ ಉದ್ದೇಶವನ್ನು ಸಾಧಿಸುವ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ವಿಶಾಲವಾದ ಐತಿಹಾಸಿಕ ಹಿನ್ನೆಲೆಯನ್ನು ಒಂದೇ ರೀತಿಯಲ್ಲಿ ವ್ಯಾಖ್ಯಾನಿಸುವುದು ಸೂಕ್ತವಲ್ಲ.

ನಮ್ಮ ನಿಲುವು ಸ್ಪಷ್ಟವಾಗಿದೆ: ದಲಿತರಿಗೆ ನ್ಯಾಯ ಸಿಗಬೇಕು, ಮುಸ್ಲಿಮರಿಗೆ ಗೌರವ ಸಿಗಬೇಕು, ಎಲ್ಲಾ ಸಮುದಾಯಗಳಿಗೂ ಸಂವಿಧಾನಬದ್ಧ ಸಮಾನ ಹಕ್ಕುಗಳು ದೊರೆಯಬೇಕು. ಸಾಮಾಜಿಕ ಐಕ್ಯತೆ ಎಂಬುದು ಪರಸ್ಪರರ ಇತಿಹಾಸ, ಧರ್ಮ ಮತ್ತು ಅಸ್ಮಿತೆಯನ್ನು ಗೌರವಿಸುವುದರ ಮೂಲಕವೇ ಬಲಗೊಳ್ಳಬೇಕು. ಸಮಾಜದಲ್ಲಿ ಅನಗತ್ಯ ಗೊಂದಲ ಮತ್ತು ತಪ್ಪು ತಿಳಿವಳಿಕೆಗಳಿಗೆ ಅವಕಾಶ ನೀಡದೆ, ಇತಿಹಾಸದ ಸತ್ಯಾಂಶಗಳ ಆಧಾರದ ಮೇಲೆ ಜವಾಬ್ದಾರಿಯುತ ಚರ್ಚೆಗಳು ನಡೆಯಲಿ ಎಂದು ಶೇಕ್ ಫರೀದ್ ಉಮರಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶೇಕ್ ಫರೀದ್ ಉಮರಿ ಜಿಲ್ಲಾಧ್ಯಕ್ಷರು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ, ರಾಯಚೂರು ಜಿಲ್ಲೆ

ರೈತರು, ಕೃಷಿ ಕೂಲಿಕಾರರ ಹೋರಾಟಕ್ಕೆ ಸ್ಪಂದನೆ: ನ. 2ರಂದು ಜಿಲ್ಲಾಧಿಕಾರಿಗಳಿಂದ ಸಭೆ

ಹೋರಾಟಕ್ಕೆ ಜಯದ ಸ್ಪಂದನೆ ಎಂದ ಸಿಪಿಐ(ಎಂ) ಕಾರ್ಯದರ್ಶಿ ನರಸಣ್ಣ ನಾಯಕ; ವಿವಿಧ ಬೇಡಿಕೆಗಳ ಕುರಿತು ಚರ್ಚೆ, ದಾಖಲೆಗಳೊಂದಿಗೆ ಹಾಜರಾಗಲು ಅಧಿಕಾರಿಗಳಿಗೆ ಸೂಚನೆ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಅಕ್ಟೋಬರ್ 27ರಂದು ರಾಯಚೂರಿನಲ್ಲಿ ನಡೆದ ಹೋರಾಟಕ್ಕೆ ಜಿಲ್ಲಾಡಳಿತ ಸ್ಪಂದಿಸಿದೆ. ರೈತರು, ಕೃಷಿ ಕೂಲಿಕಾರರು ಹಾಗೂ ಗ್ರಾಮೀಣ ಕಾರ್ಮಿಕರ ವಿವಿಧ ಬೇಡಿಕೆಗಳ ಕುರಿತು ಚರ್ಚಿಸಲು ನವೆಂಬರ್ 2ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ಕರೆಯಲಾಗಿದೆ ಎಂದು ಸಿಪಿಐ(ಎಂ) ಕಾರ್ಯದರ್ಶಿ ನರಸಣ್ಣ ನಾಯಕ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರು ಹಾಗೂ ಕೃಷಿ ಕೂಲಿಕಾರರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿದ ಹೋರಾಟಕ್ಕೆ ಸಕಾರಾತ್ಮಕ ಸ್ಪಂದನೆ ದೊರೆತಿದೆ. ಜಿಲ್ಲಾಧಿಕಾರಿಗಳು ಸಭೆ ಕರೆದಿರುವುದು ಹೋರಾಟಕ್ಕೆ ದೊರೆತ ಜಯದ ಸ್ಪಂದನೆಯಾಗಿದೆ ಎಂದು ಹೇಳಿದರು.



ಜಿಲ್ಲೆಯ ಸಮಗ್ರ ನೀರಾವರಿ ವ್ಯವಸ್ಥೆ, ವಿದ್ಯುತ್ ಸಮಸ್ಯೆ, ಬರಗಾಲ, ಬೆಳೆ ಪರಿಹಾರ ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ.

ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿಯಿಂದ ಅಕ್ಟೋಬರ್ 27ರಂದು ಹೊರಡಿಸಿರುವ ಸಭೆಯ ಸೂಚನಾ ಪತ್ರದ ಪ್ರಕಾರ, ನವೆಂಬರ್ 2ರಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಮತ್ತು ಗ್ರಾಮೀಣ ಕಾರ್ಮಿಕರ ಸಂಘ, ಲೋಹರವಾಡಿ ವತಿಯಿಂದ ಸಲ್ಲಿಸಿರುವ ಮನವಿಯಲ್ಲಿ ಪ್ರಸ್ತಾಪಿಸಲಾದ ಬೇಡಿಕೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು.

ಸಭೆಗೆ ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಅಗತ್ಯ ಮಾಹಿತಿ ಮತ್ತು ಸಂಬಂಧಿತ ದಾಖಲೆಗಳೊಂದಿಗೆ ಕಡ್ಡಾಯವಾಗಿ ಹಾಜರಾಗುವಂತೆ ಜಿಲ್ಲಾಧಿಕಾರಿಗಳ ಕಚೇರಿ ಸೂಚನೆ ನೀಡಿದೆ. ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳು, ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕರು, ತಹಶೀಲ್ದಾರರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸಭೆಯ ಸೂಚನಾ ಪತ್ರ ರವಾನಿಸಲಾಗಿದೆ.

ಅಕ್ಟೋಬರ್ 27ರಂದು ರೈತರು, ಕೃಷಿ ಕೂಲಿಕಾರರು ಹಾಗೂ ಗ್ರಾಮೀಣ ಕಾರ್ಮಿಕರು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರಾಯಚೂರಿನಲ್ಲಿ ಹೋರಾಟ ನಡೆಸಿದ್ದರು. ಇದೀಗ ಜಿಲ್ಲಾಧಿಕಾರಿಗಳೇ ಸಭೆ ಕರೆದಿರುವುದರಿಂದ ಹೋರಾಟದ ಬೇಡಿಕೆಗಳ ಕುರಿತು ಯಾವ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂಬ ನಿರೀಕ್ಷೆ ಸಂಘಟನೆಗಳ ಮುಖಂಡರು ಹಾಗೂ ರೈತರಲ್ಲಿದೆ ಎಂದು ನರಸಣ್ಣ ನಾಯಕ ತಿಳಿಸಿದರು.

ದಕ್ಷಿಣ ಕಾಶಿ ನಂಜನಗೂಡಿನ ಇಂದಿರಾ ಕ್ಯಾಂಟೀನ್‌ಗೆ ಶಾಸಕ ದರ್ಶನ್ ಧ್ರುವನಾರಾಯಣ್ ಬೇಟಿ ಊಟ ಸವಿದು ರುಚಿ ಪರಿಶೀಲನೆ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ ಅಕ್ಟೋಬರ್ 30 ಮೈಸೂರು ಜಿಲ್ಲೆ, ದಕ್ಷಿಣ ಕಾಶಿ ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರುವ ನಂಜನಗೂಡು ಚಾಮರಾಜನಗರ ಟಿ ನರಸಿಪುರ ಮುಖ್ಯ ರಸ್ತೆ ಬಳಿಯಲ್ಲಿರುವ ಇಂದಿರಾ ಇಂದಿರಾ ಕ್ಯಾಂಟೀನ್ ಗೆ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರು ಭೇಟಿ ನೀಡಿ, ಅಡುಗೆ ಕೊಠಡಿ ಹಾಗೂ ಸುತ್ತಮುತ್ತಲಿನ ಸ್ವಚ್ಛತೆ ಮತ್ತು ಪರಿಸರವನ್ನು ಪರಿಶೀಲನೆ ನಡೆಸಿದರು



ಕಾಂಗ್ರೆಸ್ ಸರ್ಕಾರದ ಮಹತ್ವಕಾಂಕ್ಷೆ ಯೋಜನೆ ಆದ ಈ ಇಂದಿರ ಕ್ಯಾಂಟೀನ್ ಯೋಜನೆಗೆ ಸಾಕಷ್ಟು ಅನುದಾನ ನೀಡಿ ಬಡವರ ಹಸಿವು ನೀಗಿಸುವ ಕ್ಯಾಂಟೀನ್ ಆಗಿದ್ದು ಕ್ಯಾಂಟೀನ್‌ನಲ್ಲಿ ಮಧ್ಯಾಹ್ನದ ಊಟವನ್ನು ಸೇವಿಸಿ, ಆಹಾರದ ಗುಣಮಟ್ಟವನ್ನು ಪರಿಶೀಲಿಸಿದ ಶಾಸಕರು ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಆಹಾರ ಒದಗಿಸುವುದು ಇಂದಿರಾ ಕ್ಯಾಂಟೀನ್‌ನ ಮುಖ್ಯ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ಅಗತ್ಯ ಸೌಲಭ್ಯಗಳ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಶಾಸಕರು ಸೂಚನೆ ನೀಡಿದರು ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ ಹಾಗೂ ಕಾಂಗ್ರೆಸ್ ಮುಖಂಡರು ಮುಂತಾದವರು ಹಾಜರಿದ್ದರು.

ರೈಲ್ವೆ ಸಚಿವ ಸೋಮಣ್ಣನವರ ಆಶ್ವಾಸನೆಗೆ ಒಂದು ವರ್ಷ

ಕುಷ್ಟಗಿ–ಬೆಂಗಳೂರು ನೇರ ರೈಲು ಸೇವೆ ಆರಂಭದ ಸವಿನೆನಪು; ಅಭಿವೃದ್ಧಿಗಾಗಿ ಮತ್ತೊಮ್ಮೆ ಪಕ್ಷಾತೀತ ಹೋರಾಟಕ್ಕೆ ಕರೆ


❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಕುಷ್ಟಗಿ?ಬೆಂಗಳೂರು ನೇರ ರೈಲು ಸೇವೆ ಆರಂಭಿಸುವಂತೆ ರೈಲ್ವೆ ಸಚಿವ ವಿ. ಸೋಮಣ್ಣ ಅವರಿಗೆ ಮನವಿ ಸಲ್ಲಿಸಿ, ಭರವಸೆ ಪಡೆದ ಘಟನೆಗೆ ಅಕ್ಟೋಬರ್ 31ಕ್ಕೆ ಒಂದು ವರ್ಷ ಪೂರ್ಣಗೊಳ್ಳಲಿದೆ.

ಕಳೆದ ವರ್ಷ ಅಕ್ಟೋಬರ್ 31ರಂದು ರೈಲ್ವೆ ಹೋರಾಟ ಸಮಿತಿಯ ಸದಸ್ಯರು ಹಾಲಿ ಹಾಗೂ ಮಾಜಿ ಶಾಸಕರ ನೇತೃತ್ವದಲ್ಲಿ ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ, ಕುಷ್ಟಗಿ?ಬೆಂಗಳೂರು ನೇರ ರೈಲು ಸಂಚಾರ ಆರಂಭಿಸುವಂತೆ ಒತ್ತಾಯಿಸಿದ್ದರು.

ಈ ಸಂದರ್ಭದಲ್ಲಿ ಹಾಲಿ ಹಾಗೂ ಮಾಜಿ ಶಾಸಕರನ್ನು ಆತ್ಮೀಯವಾಗಿ ಸನ್ಮಾನಿಸಿದ ಸಚಿವರು, ಒಂದೂವರೆ ತಿಂಗಳೊಳಗೆ ರೈಲು ಸಂಚಾರ ಆರಂಭಿಸುವುದಾಗಿ ಭರವಸೆ ನೀಡಿದ್ದರು. ಅದರಂತೆ ರೈಲು ಸೇವೆ ಆರಂಭಗೊಂಡಿದ್ದು, ತಾಲೂಕಿನ ಜನರ ಬಹುದಿನಗಳ ಬೇಡಿಕೆಗೆ ಸ್ಪಂದನೆ ದೊರೆತಿದೆ.

ಕುಷ್ಟಗಿ ತಾಲೂಕಿನ ಅಭಿವೃದ್ಧಿಯ ವಿಚಾರ ಬಂದಾಗ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಹಾಲಿ ಹಾಗೂ ಮಾಜಿ ಶಾಸಕರು ಒಂದಾಗುತ್ತಾರೆ ಎಂಬ ಉತ್ತಮ ಸಂದೇಶ ಈ ಹೋರಾಟದ ಮೂಲಕ ಜನರಿಗೆ ತಲುಪಿದೆ.



ಆದರೆ ರೈಲ್ವೆ ಕ್ಷೇತ್ರದಲ್ಲಿ ಕುಷ್ಟಗಿ ಇನ್ನಷ್ಟು ಅಭಿವೃದ್ಧಿ ಹೊಂದಬೇಕಿದೆ. ಹೆಚ್ಚುವರಿ ರೈಲು ಸೌಲಭ್ಯಗಳು, ರೈಲುಗಳ ನಿಲುಗಡೆ ಹಾಗೂ ನಿಲ್ದಾಣದ ಅಭಿವೃದ್ಧಿಗಾಗಿ ಮತ್ತೊಮ್ಮೆ ಎಲ್ಲ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಒಂದಾಗಿ ಹೋರಾಟ ನಡೆಸಬೇಕಿದೆ ಎಂದು ರೈಲ್ವೆ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿರೇಶ ಬಂಗಾರಶೆಟ್ಟರ ತಿಳಿಸಿದ್ದಾರೆ.

ಪೊಲೀಸ್ ಇಲಾಖೆ, ಮಹಾನಗರ ಪಾಲಿಕೆಯಲ್ಲಿ ಖಾಲಿ ಹುದ್ದೆ ಭರ್ತಿಗೆ AIMIM ಆಗ್ರಹ

ಜಿಲ್ಲೆಯಲ್ಲಿ 24 ಪಿಎಸ್ಐ, 127 ಪೊಲೀಸ್ ಪೇದೆಗಳ ಹುದ್ದೆಗಳು ಖಾಲಿ; ಪಾಲಿಕೆಯಲ್ಲಿ ಹೊರಗುತ್ತಿಗೆ ನೌಕರರ ಸೇವಾ ಭದ್ರತೆ ಹಾಗೂ ಖಾಯಂ ನೇಮಕಾತಿಗೆ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ರಾಯಚೂರು ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಉಪನಿರೀಕ್ಷಕರು (ಪಿಎಸ್ಐ) ಹಾಗೂ ಪೊಲೀಸ್ ಪೇದೆಗಳ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಅದೇ ರೀತಿ ರಾಯಚೂರು ಮಹಾನಗರ ಪಾಲಿಕೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೊರತೆ ನೀಗಿಸಿ, ಹಲವು ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಸೇವಾ ಭದ್ರತೆ ಕಲ್ಪಿಸಬೇಕು ಎಂದು ಆಲ್ ಇಂಡಿಯಾ ಮಜ್ಲಿಸ್–ಎ–ಇತ್ತೆಹಾದುಲ್ ಮುಸ್ಲಿಮೀನ್ (AIMIM) ಪಕ್ಷದ ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಡಿ ಆಗ್ರಹಿಸಿದ್ದಾರೆ.

ಈ ಕುರಿತು ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆಯಲ್ಲಿ, ಜಿಲ್ಲೆಯ ಜನಸಂಖ್ಯೆ ಹೆಚ್ಚಳ ಹಾಗೂ ಅಪರಾಧ ಪ್ರಕರಣಗಳ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಗೆ ಹೆಚ್ಚುವರಿ ಸಿಬ್ಬಂದಿಯ ಅಗತ್ಯವಿದೆ. ಪ್ರಸ್ತುತ ಜಿಲ್ಲೆಯಲ್ಲಿ 24 ಪಿಎಸ್ಐ ಹಾಗೂ 127 ಪೊಲೀಸ್ ಪೇದೆಗಳ ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದಾರೆ.



ಸಿಬ್ಬಂದಿ ಕೊರತೆಯಿಂದ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರ ಮೇಲೆ ಹೆಚ್ಚಿನ ಕೆಲಸದ ಒತ್ತಡ ಉಂಟಾಗುತ್ತಿದ್ದು, ರಾತ್ರಿ ಗಸ್ತು, ಅಪರಾಧ ಪ್ರಕರಣಗಳ ತನಿಖೆ ಸೇರಿದಂತೆ ಕಾನೂನು ಸುವ್ಯವಸ್ಥೆ ಕಾಪಾಡುವ ಕಾರ್ಯಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಖಾಲಿ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಮಹಾನಗರ ಪಾಲಿಕೆಯಲ್ಲಿ ಸಿಬ್ಬಂದಿ ಕೊರತೆ:* ರಾಯಚೂರು ಮಹಾನಗರ ಪಾಲಿಕೆಯಲ್ಲಿ ಸಾರ್ವಜನಿಕರಿಗೆ ಮೂಲಭೂತ ನಾಗರಿಕ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲು ಅಗತ್ಯವಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೊರತೆ ಇದೆ. ಗ್ರೇಡ್ ಎ ವಿಭಾಗದಲ್ಲಿ 11 ಅಧಿಕಾರಿಗಳ ಕೊರತೆಯಿದ್ದು, ಇಬ್ಬರು ಡೆಪ್ಯುಟೇಷನ್ ಹಾಗೂ ಒಬ್ಬರು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರೇಡ್ ಬಿ ವಿಭಾಗದಲ್ಲಿ 10 ಅಧಿಕಾರಿಗಳ ಕೊರತೆಯಿದ್ದು, ಮೂವರು ಡೆಪ್ಯುಟೇಷನ್‌ನಲ್ಲಿದ್ದಾರೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ಗ್ರೇಡ್ ಸಿ ವಿಭಾಗದಲ್ಲಿ 136 ಸಿಬ್ಬಂದಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಐವರು ಡೆಪ್ಯುಟೇಷನ್‌ನಲ್ಲಿದ್ದಾರೆ ಹಾಗೂ ಎಂಟು ಹುದ್ದೆಗಳು ಖಾಲಿ ಇವೆ. ಗ್ರೇಡ್ ಡಿ ವಿಭಾಗದಲ್ಲಿ 383 ಸಿಬ್ಬಂದಿ ಮತ್ತು ಪೌರಕಾರ್ಮಿಕರು ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದು, 71 ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದಾರೆ.

ಒಟ್ಟಾರೆ 520 ಅಧಿಕಾರಿಗಳು, ಸಿಬ್ಬಂದಿ ಹಾಗೂ ಪೌರಕಾರ್ಮಿಕರು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರು ಉದ್ಯೋಗದ ಅನಿಶ್ಚಿತತೆಯಲ್ಲಿ ಬದುಕುವಂತಾಗಬಾರದು. ಅವರ ಸೇವಾ ಭದ್ರತೆ, ಗೌರವಯುತ ಜೀವನ ಹಾಗೂ ಕುಟುಂಬಗಳ ಆರ್ಥಿಕ ಸ್ಥಿರತೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಅಭಿವೃದ್ಧಿ ಎಂದರೆ ಕೇವಲ ರಸ್ತೆ, ಕಟ್ಟಡ ನಿರ್ಮಾಣಕ್ಕೆ ಸೀಮಿತವಾಗಬಾರದು. ಸಾರ್ವಜನಿಕರಿಗೆ ಸೇವೆ ಸಲ್ಲಿಸುವ ಅಧಿಕಾರಿಗಳು, ಸಿಬ್ಬಂದಿ ಹಾಗೂ ಪೌರಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವುದೂ ಅಭಿವೃದ್ಧಿಯ ಪ್ರಮುಖ ಭಾಗವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ, ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ ಹಾಗೂ ಗೃಹ ಇಲಾಖೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಪೊಲೀಸ್ ಇಲಾಖೆಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಮಹಾನಗರ ಪಾಲಿಕೆಯ ಸಿಬ್ಬಂದಿ ಕೊರತೆ ನೀಗಿಸುವುದರ ಜೊತೆಗೆ ಹೊರಗುತ್ತಿಗೆ ನೌಕರರ ಸೇವೆಯನ್ನು ನಿಯಮಾನುಸಾರ ಖಾಯಂಗೊಳಿಸುವ ಸಾಧ್ಯತೆಗಳನ್ನು ಪರಿಶೀಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಪಕ್ಷದ ನಗರ ಪ್ರಧಾನ ಕಾರ್ಯದರ್ಶಿ ಶೈಬಾಜ್ ಖಾನ್, ನಗರ ಜಂಟಿ ಕಾರ್ಯದರ್ಶಿಗಳಾದ ತನ್ವೀರ್ ಅಹ್ಮದ್ ಖಾನ್ ಹಾಗೂ ಸಂತೋಷ್ ಸೂರ್ಯವಂಶಿ, ಕಾರ್ಯಕಾರಿ ಸದಸ್ಯ ಈರಣ್ಣೇಶ್ ಬೋವಿ, ಮಹಿಳಾ ಜಂಟಿ ಕಾರ್ಯದರ್ಶಿ ಪರ್ವೀನ್ ಸಲೀಂ ಶೇಕ್, ವಾರ್ಡ್ ನಂ. 28ರ ಕಾರ್ಯದರ್ಶಿ ರಹಮಾನ್ ಹಾಗೂ ವಾರ್ಡ್ ನಂ. 29ರ ಅಧ್ಯಕ್ಷ ಮೊಹಮ್ಮದ್ ಅಲಿಮ್ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ನೇಮಕಾತಿ 2026–45 ಪೌರಕಾರ್ಮಿಕ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ.

ಶಿವಮೊಗ್ಗ ಮಹಾನಗರ ಪಾಲಿಕೆ ನೇಮಕಾತಿ 2026: 45 ಪೌರಕಾರ್ಮಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಶಿವಮೊಗ್ಗ ಮಹಾನಗರ ಪಾಲಿಕೆಯು ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಪೌರಕಾರ್ಮಿಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕೋರಿದೆ. ಕರ್ನಾಟಕ ಸರ್ಕಾರದ ಅಧೀನದಲ್ಲಿರುವ ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ನವೆಂಬರ್–2026 ರಂದು ಅಥ–'ವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಸಂಸ್ಥೆಯ ಹೆಸರು: ಶಿವಮೊಗ್ಗ ಮಹಾನಗರ ಪಾಲಿಕೆ ಹುದ್ದೆಗಳ ಸಂಖ್ಯೆ: 45 ಉದ್ಯೋಗ ಸ್ಥಳ: ಶಿವಮೊಗ್ಗ ? ಕರ್ನಾಟಕ ಹುದ್ದೆಯ ಹೆಸರು: ಪೌರಕಾರ್ಮಿಕ ವೇತನ: ತಿಂಗಳಿಗೆ ರೂ. 27,000 ? 46,675/– ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–ನವೆಂಬರ್–2026. ಅಧಿಕೃತ ವೆಬ್‌ಸೈಟ್: shivamoggacitycorp.org.

ಹತ್ಯೆಗೀಡಾದ ವ್ಯಾಪಾರಿ ಬಾಪುರ್ ನರಸಿಂಹ ಶೆಟ್ಟಿ ಕುಟುಂಬಕ್ಕೆ ಕುಷ್ಟಗಿ ಆರ್ಯ ವೈಶ್ಯ ಸಮಾಜದಿಂದ 1,00,100 ಸಹಾಯಧನ

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ರಾಯಚೂರಿನಲ್ಲಿ ಹತ್ಯೆಗೀಡಾದ ಟೀ ಅಂಗಡಿ ವ್ಯಾಪಾರಿ ಶ್ರೀ ಬಾಪುರ್ ನರಸಿಂಹ ಶೆಟ್ಟಿ ಅವರ ಕುಟುಂಬಕ್ಕೆ ಕುಷ್ಟಗಿ ಆರ್ಯ ವೈಶ್ಯ ಸಮಾಜದ ವತಿಯಿಂದ ಸಾಂತ್ವನ ಹೇಳಿ ?1,00,100 (ಒಂದು ಲಕ್ಷದ ಒಂದು ನೂರು) ರೂಪಾಯಿ ಸಹಾಯಧನ ನೀಡಲಾಯಿತು.



ಈ ಸಂದರ್ಭದಲ್ಲಿ ಕುಷ್ಟಗಿ ಆರ್ಯ ವೈಶ್ಯ ಸಮಾಜದ ಉಪಾಧ್ಯಕ್ಷ ಓಂಕಾರಪ್ಪ ಕಂದಕೂರ, ಕಾರ್ಯದರ್ಶಿ ಪ್ರಭಾಕರ್ ಕಂದಕೂರ, ಸದಸ್ಯರಾದ ಸತ್ಯನಾರಾಯಣ ಇಲ್ಲೂರ್, ಬಸವರಾಜ ಶೆಟ್ಟರ್, ರಾಘವೇಂದ್ರ ಗಿಣಿವಾರ, ವೆಂಕಟೇಶ್ ತೆಮ್ಮಿನಾಳ್, ಯುವಜನ ಸಂಘದ ಅಧ್ಯಕ್ಷ ಉಮೇಶ್ ಶೆಟ್ಟರ್, ರಘುರಾಮ್ ಕಂದಕೂರ, ಪ್ರಜ್ವಲ್ ಕಂದಕೂರ, ಸಂತೋಷ ಶೆಟ್ಟರ್ ಹಾಗೂ ರಾಮಚಂದ್ರ ಬಿಜಕಲ್ ಉಪಸ್ಥಿತರಿದ್ದರು. ರಾಯಚೂರು ಆರ್ಯ ವೈಶ್ಯ ಸಮಾಜದ ಅಧ್ಯಕ್ಷರಾದ ಸಾವಿತ್ರಿ ಪುರುಷೋತ್ತಮ್ ಸೇರಿದಂತೆ ಸಮಾಜದ ಹಿರಿಯರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು. ದುಃಖದ ಸಂದರ್ಭದಲ್ಲಿ ಮೃತರ ಕುಟುಂಬಕ್ಕೆ ನೆರವಿನ ಹಸ್ತ ಚಾಚಿದ ಕುಷ್ಟಗಿ ಆರ್ಯ ವೈಶ್ಯ ಸಮಾಜದ ಪದಾಧಿಕಾರಿಗಳು, ಸದಸ್ಯರು ಹಾಗೂ ಸಹಾಯಧನ ನೀಡಿದ ಎಲ್ಲ ಸಮಾಜಬಾಂಧವರಿಗೆ ಕುಟುಂಬದ ಪರವಾಗಿ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸಲಾಯಿತು.

ರಾಜ್ಯಮಟ್ಟದ ಕರೋಕೆ ಗಾಯನ ಸ್ಪರ್ಧೆ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಒಡೆಯರ್ ಮೆಲೋಡಿಸ್ ಹಾಗೂ ರೋಜಾ ಇವೆಂಟ್ಸ್ ಇವರುಗಳ ಸಹಯೋಗದಲ್ಲಿ ಪ್ರಥಮ ಬಾರಿಗೆ ಲಿಂಗಸಗೂರು ತಾಲೂಕಿನಲ್ಲಿ ರಾಜ್ಯ ಮಟ್ಟದ ಕರೋಕೆ ಗಾಯನ ಸ್ಪರ್ಧೆ 2026 ರ ಎದೆ ತುಂಬಿ ಹಾಡುವೆನು ಸೀಸನ್ –1 ರ ಆನ್ಲೈನ್ ಆಡಿಷನ್ ವ್ಯವಸ್ಥೆ ಆಯೋಜಿಸಿದ್ದು.



ನಿಮ್ಮ ಗಾಯನ ಪ್ರತಿಭೆಯನ್ನು ಪ್ರದರ್ಶಿಸಲು ಇದೊಂದು ಅದ್ಭುತ ವೇದಿಕೆಯಾಗಿದ್ದು, ದಿನಾಂಕ 15–11–2026 ರಂದು ಬಿ ಇ ಓ ಆಫೀಸ್ ಆವರಣ ಗುರು ಭವನದಲ್ಲಿ ಜರುಗಲಿದ್ದು ಪ್ರವೇಶ ಫೀ 400 ರೂ ಇದ್ದು ಸಮಯ ಬೆಳಗ್ಗೆ 10 ರಿಂದ ಸಂಜೆ 6 ರ ವರೆಗೆ ನಡೆಯಲಿದೆ ಇದರಲ್ಲಿ ವಿಜೇತ ರಾದವರಿಗೆ ಮೊದಲ ಬಹುಮಾನ 20 ಸಾವಿರ , ದ್ವಿತೀಯ ಬಹುಮಾನ 10 ಸಾವಿರ , ತೃತೀಯ ಬಹುಮಾನ 5 ಸಾವಿರ ಹಾಗೂ ಉತ್ತಮ ಗಾಯಕರಿಗೆ 1000 ರೂಗಳ ನೆನಪಿನ ಕಾಣಿಕೆಯನ್ನು ನೀಡಲಾಗುವುದೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ . ಹೆಚ್ಚಿನ ಮಾಹಿತಿಗಾಗಿ :– ಒಡೆಯರ್ ಮೆಲೋಡಿಸ್ – 9591864608 ರೋಜಾ ಇವೆಂಟ್ಸ್ – 7019942303 ಗೆ ಸಂಪರ್ಕಿಸಿ

ನಮ್ಮ ತಂದೆ ಮಹಾದೇವಪ್ಪನವರು ಯಾವುದೇ ಪಕ್ಷಕ್ಕೂ ಹೋಗುವುದಿಲ್ಲ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದಲೇ ಸ್ಪರ್ಧೆ ಸಂಸದ ಸುನಿಲ್ ಬೋಸ್

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ನಮ್ಮ ತಂದೆ ಡಾಕ್ಟರ್ ಎಚ್ ಸಿ ಮಹದೇವಪ್ಪನವರು ಹಾಲಿ ಟಿ ನರಸಿಪುರ ಕ್ಷೇತ್ರದ ಶಾಸಕರಾಗಿ ಜನರ ಸೇವೆ ಮಾಡುತ್ತಿದ್ದಾರೆ ಮಹದೇವಪ್ಪನವರು ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಬೇರೆ ಪಕ್ಷಕ್ಕೆ ಹೋಗಿ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಸಂಸದ ಸುನಿಲ್ ಬೋಸ್ ಸ್ಪಷ್ಟಪಡಿಸಿದರು ಅವರು ತಮ್ಮ ಲೋಕಸಭಾ ವ್ಯಾಪ್ತಿಗೆ ಬರುವ ನಂಜನಗೂಡು ಮೈಸೂರು ಊಟಿ ರಸ್ತೆ,

ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಬಸವನಪುರ ಗ್ರಾಮದ ಬಳಿ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡುತ್ತಾ ನಮ್ಮ ತಂದೆ ಡಾಕ್ಟರ್ ಎಚ್ ಸಿ ಮಹದೇವಪ್ಪನವರಿಗೆ ಕಾಂಗ್ರೆಸ್ ಪಕ್ಷದಿಂದ ಯಾವುದೇ ಅನ್ಯಾಯ ಆಗಿಲ್ಲ ಅವ–ರಿಗೆ ಕಾಂಗ್ರೆಸ್ ಪಕ್ಷವು ಎಲ್ಲವನ್ನು ನೀಡಿದೆ



ಕಾಂಗ್ರೆಸ್ ಪಕ್ಷದಿಂದ ಎರಡು ಬಾರಿ ಮಂತ್ರಿ ಆಗಿದ್ದಾರೆ ಅವರಿಗೆ ಪಕ್ಷದಿಂದ ಯಾವ ರೀತಿಯ ಅನ್ಯಾಯವಾಗಲಿ ತೊಂದರೆಯೂ ಆಗಿಲ್ಲ ಅವರು ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷವನ್ನು ಬಿಡುವ ಮಾತಿಲ್ಲ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದಲೇ ಸ್ಪರ್ಧೆ ಮಾಡುತ್ತಾರೆ ಎಂದು ಹೇಳಿದ ಸಂಸದರು ಮಹದೇವಪ್ಪನವರು ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಬಿಜೆಪಿ ಮೈತ್ರಿ ಪಕ್ಷದೊಂದಿಗೆ ಸೇರಿಕೊಂಡು ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಾರೆ ಎಂಬ ಗಾಳಿ ಸುದ್ದಿಯನ್ನು ಹಬ್ಬಿಸುತ್ತಿದ್ದಾರೆ.

ಅದು ಎಲ್ಲ ಸುಳ್ಳು ಯಾವುದೇ ಕಾರಣಕ್ಕೂ ನಮ್ಮ ತಂದೆ ಮಹಾದೇವಪ್ಪನವರು ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಬೇರೆ ಪಕ್ಷಕ್ಕೆ ಹೋಗುವುದಿಲ್ಲ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಟಿ ನರಸೀಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು ಈ ಸಂದರ್ಭದಲ್ಲಿ ದಕ್ಷಿಣ ಕಾಶಿ ನಂಜನಗೂಡು ಶ್ರೀಕಂಠೇಶ್ವರ ದೇವಾಲಯದ ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ದಲಿತ ಮುಖಂಡ ಹೆಜ್ಜಿಗೆ ಆರ್ ಇಂದನ್ ಬಾಬು ತಾಲೂಕು ಕುರುಬ ಸಮಾಜದ ಮುಖಂಡ ಕೆಂಪಣ್ಣ ಗುತ್ತಿಗೆದಾರ ಹೆಜ್ಜಿಗೆ ರವಿ ಕುಮಾರ್ ಗೋಪಾಲ್ ಕೃಷ್ಣ ಪುಟ್ಟಣ್ಣ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕೆ ಬಿ ಸ್ವಾಮಿ ಚೋಳರಾಜು ಕುಮಾರ್ ಗೌಡ ಸೇರಿದಂತೆ ಅನೇಕ ಮುಖಂಡರುಗಳು ಈ ಸಂದರ್ಭದಲ್ಲಿ ಹಾಜರಿದ್ದರು

ಹಳೆ ಪಟ್ಟಣ ಪಂಚಾಯತ್ ಮುಂದೆ ವೇಗ ನಿಯಂತ್ರಕ ಇಲ್ಲ: ಶಾಲಾ ಮಕ್ಕಳ ಸುರಕ್ಷತೆಗೆ ಆತಂಕ!

ಅತಿವೇಗದ ವಾಹನ ಸಂಚಾರದಿಂದ ಮಕ್ಕಳಿಗೆ ರಸ್ತೆ ದಾಟಲು ತೊಂದರೆ ಕೂಡಲೇ ಹಂಪ್ಸ್ ಅಳವಡಿಸಲು ಸಾರ್ವಜನಿಕರ ಆಗ್ರಹ

❏ ನೈಜ್ಯ ದೆಸೆ ನ್ಯೂಸ್

ಸಿರವಾರ: ಸಿರವಾರ ಪಟ್ಟಣದ ಹಳೆ ಪಟ್ಟಣ ಪಂಚಾಯತ್ ಕಚೇರಿ ಮುಂಭಾಗದ ಮುಖ್ಯ ರಸ್ತೆಯಲ್ಲಿ ವೇಗ ನಿಯಂತ್ರಕ (ಹಂಪ್ಸ್) ಇಲ್ಲದಿರುವುದರಿಂದ ಶಾಲಾ ಮಕ್ಕಳು ಪ್ರತಿನಿತ್ಯ ಆತಂಕದ ನಡುವೆ ರಸ್ತೆ ದಾಟುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ರಸ್ತೆಯಲ್ಲಿ ವಾಹನಗಳು ಅತಿವೇಗವಾಗಿ ಸಂಚರಿಸುತ್ತಿದ್ದು, ಶಾಲೆಗೆ ತೆರಳುವ ಮತ್ತು ಶಾಲೆಯಿಂದ ಮನೆಗೆ ಹಿಂದಿರುಗುವ ಮಕ್ಕಳು ರಸ್ತೆ ದಾಟಲು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ವಿಶೇಷವಾಗಿ ಬೆಳಿಗ್ಗೆ ಮತ್ತು ಸಂಜೆ ಶಾಲಾ





ಸಮಯದಲ್ಲಿ ವಾಹನಗಳ ಸಂಚಾರ ಹೆಚ್ಚಾಗಿರುವುದರಿಂದ ಮಕ್ಕಳ ಸುರಕ್ಷತೆಯ ಬಗ್ಗೆ ಪೋಷಕರು ಕಳವಳ ವ್ಯಕ್ತಪಡಿಸಿದ್ದಾರೆ.

ಈ ರಸ್ತೆಯಲ್ಲಿ ಯಾವುದೇ ವೇಗ ನಿಯಂತ್ರಕ ವ್ಯವಸ್ಥೆ ಇಲ್ಲದಿರುವುದು ವಾಹನ ಸವಾರರಿಗೆ ವೇಗವಾಗಿ ಸಂಚ–ರಿಸಲು ಅವಕಾಶ ಮಾಡಿಕೊಟ್ಟಂತಾಗಿದೆ. ಈಗಾಗಲೇ ಮಕ್ಕಳ ಸಂಚಾರಕ್ಕೆ ಅಪಾಯದ ವಾತಾವರಣ ನಿರ್ಮಾಣವಾಗಿದ್ದು, ಮುಂದಿನ ದಿನಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆಯುವ ಮೊದಲು ಸಂಬಂಧಪಟ್ಟ ಅಧಿಕಾ–ರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕೂಡಲೇ ಹಳೆ ಪಟ್ಟಣ ಪಂಚಾಯತ್ ಕಚೇರಿ ಮುಂಭಾಗದಲ್ಲಿ ನಿಯಮಾನುಸಾರ ವೈಜ್ಞಾನಿಕ ಮಾದರಿಯ ವೇಗ ನಿಯಂತ್ರಕ ಅಳವಡಿಸುವುದರ ಜೊತೆಗೆ ರಸ್ತೆಯಲ್ಲಿ ಬಿಳಿ ಬಣ್ಣದ ಸೂಚಕ ಪಟ್ಟಿಗಳನ್ನು ಹಾಕಬೇಕು. ವಾಹನ ಸವಾರರಿಗೆ ಎಚ್ಚರಿಕೆ ಫಲಕಗಳನ್ನು ಅಳವಡಿಸಿ, ಶಾಲಾ ಮಕ್ಕಳ ಸುರಕ್ಷಿತ ಸಂಚಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಹಾಗೂ ಅಧ್ಯಕ್ಷ–ರಿಗೆ ಸಾರ್ವಜನಿಕರು ಮನವಿ ಮಾಡಿದ್ದಾರೆ.

ಮಕ್ಕಳ ಸುರಕ್ಷತೆ ವಿಚಾರದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ತಕ್ಷಣ ಕ್ರಮ ಕೈಗೊಳ್ಳುವರೇ ಎಂಬುದನ್ನು ಕಾದು ನೋಡಬೇಕಿದೆ.

ಬೆಟಗೇರಿ ಸರಕಾರಿ ಪ್ರೌಢ ಶಾಲೆಯಲ್ಲಿ 'ಸ್ವಾಸ್ಥ್ಯ ಸಂಕಲ್ಪ' ಕಾರ್ಯಕ್ರಮ: ಮಾದಕ ವ್ಯಸನ ಮುಕ್ತ ಸಮಾಜಕ್ಕೆ ಕರೆ

❏ ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ಇಲ್ಲಿನ ಬೆಟಗೇರಿ ಸರಕಾರಿ ಪ್ರೌಢ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ (ಬಿಸಿ ಟ್ರಸ್ಟ್) ಪ್ರಾಯೋಜಕತ್ವದಲ್ಲಿ ವಿದ್ಯಾರ್ಥಿಗಳಿಗಾಗಿ 'ಸ್ವಾಸ್ಥ್ಯ ಸಂಕಲ್ಪ' ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡಿದ ಯೋಜನೆಯ ವಲಯ ಮೇಲ್ವಿಚಾರಕರಾದ ದೊಡ್ಡ ಬಸವರಾಜ ಕಂದಕಲ್ ಅವರು, "ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಹತ್ತು ಹಲವು ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಭಾಗದ ಜನರನ್ನು ಸಾಮಾಜಿ–ಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸಬಲರನ್ನಾಗಿಸಲು ನಿರಂತರ ಶ್ರಮಿಸುತ್ತಿದೆ. ಅದರಲ್ಲಿ 'ಸ್ವಾಸ್ಥ್ಯ ಸಂಕಲ್ಪ' ಕೂಡ ಒಂದಾಗಿದೆ. ಇಂದಿನ ದಿನಗಳಲ್ಲಿ ಮಕ್ಕಳು ಹಾಗೂ ಯುವಕರು ಹಲವು ದುಶ್ಚಟಗಳಿಗೆ ಬಲಿಯಾಗಿ, ಮಾದಕ ವ್ಯಸನಿಗಳಾಗಿ ತಮ್ಮ ಅಮೂಲ್ಯವಾದ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಅತಿಯಾದ ಮೊಬೈಲ್ ಬಳಕೆ ಕೂಡ ಇತ್ತೀಚೆಗೆ ದೊಡ್ಡ ವ್ಯಸನವಾಗಿ ಪರಿಣಮಿಸಿದೆ. ಹೀಗಾಗಿ ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು, ಸುಂದರ ಭವಿಷ್ಯ ರೂಪಿಸಿಕೊಳ್ಳುವತ್ತ ಗಮನ ಹರಿಸಬೇಕು" ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹಿರಿಯ ಶಿಕ್ಷಕ ಗಿರಿಯಪ್ಪ ಹಾರನಹಳ್ಳಿ ಮಾತನಾಡಿ, "ನಮ್ಮ ದೇಶದ ನಿಜವಾದ ಆಸ್ತಿ ಎಂದರೆ ಅದು ಮಕ್ಕಳು ಮತ್ತು ಯುವಶಕ್ತಿ. ಆದರೆ ದುರಾದೃಷ್ಟವಶಾತ್ ದೇಶದ ಆಸ್ತಿಯಾಗಬೇಕಾದ ಇವರೇ ಇಂದು ಕೊಕೇನ್, ಚರಸ್, ಗಾಂಜಾ, ಅಫೀಮು, ತಂಬಾಕಿನಂತಹ ಮಾದಕ ವಸ್ತುಗಳ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸಹ ಮಾದಕ ವಸ್ತುಗಳ ಸೇವನೆಗೆ ಬಲಿಯಾಗುತ್ತಿರುವುದು ಕಳವಳಕಾರಿ ಸಂಗತಿ. ಇದು ಹೀಗೆಯೇ ಮುಂದುವರಿದರೆ ಅನಾರೋಗ್ಯಕರ ಸಮಾಜ ನಿರ್ಮಾಣವಾಗುತ್ತದೆ" ಎಂದು ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ



ಶಾಂತವೀರಯ್ಯ ಕಳ್ಳಿಮಠ್ ಮಾತನಾಡಿ, "ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ವಿದ್ಯಾರ್ಥಿಗಳು ಯಾವುದೇ ಮಾದಕ ವ್ಯಸನಗಳಿಗೆ ಬಲಿಯಾಗದೆ, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡು ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಸಂಕಲ್ಪ ಮಾಡಬೇಕು" ಎಂದರು.

ಶಿಕ್ಷಣ ಪ್ರೇಮಿ ಶಂಕ್ರಪ್ಪ ಬಡಿಗೇರ್, ಶಿಕ್ಷಕರುಗಳಾದ ರವಿಕಿರಣ್ ಟಿಕಾರೆ, ಮರ್ದಾನಲಿ ಗಡಾದ್, ರಾಜಾಸಾಬ್ ಬಳಿಗಾರ್, ಪ್ರಕಾಶರೆಡ್ಡಿ ಗೋವಿಂದರೆಡ್ಡಿ, ವೀರಯ್ಯ ಪೂಜಾರ್, ನಾರಾಯಣಪ್ಪ ಬಿಸನಳ್ಳಿ, ಸುನಿತಾ ಯಾಳಗಿ, ಸೋಮಣ್ಣ ಹಾಗೂ ಸ್ಥಳೀಯ ಸೇವಾ ಪ್ರತಿನಿಧಿಗಳಾದ ಶ್ರೀಮತಿ ರಾಜೇಶ್ವರಿ, ಸವಿತಾ, ಕವಿತಾ ಸೇರಿದಂತೆ ಶಾಲೆಯ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಳ್ಳಾರಿಯಲ್ಲಿ ನ.1 ಕ್ಕೆ 71ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ: ಸಚಿವ ಜಮೀರ್ ಅಹ್ಮದ್ ಖಾನ್ ಅವರಿಂದ ಧ್ವಜಾರೋಹಣ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ: ಜಿಲ್ಲಾಡಳಿತದ ವತಿಯಿಂದ 71ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮವನ್ನು ನವೆಂಬರ್ 01 ರಂದು ಬೆಳಿಗ್ಗೆ 09:00 ಗಂಟೆಗೆ ನಗರದ ಸರ್ಕಾರಿ (ಮಾಜಿ ಪುರಸಭೆ) ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

ಅಂದು ಬೆಳಿಗ್ಗೆ ನಿಖರವಾಗಿ 09:00 ಗಂಟೆಗೆ ರಾಜ್ಯದ ವಸತಿ ಸಚಿವರಾದ ಬಿ.ಝೆಡ್. ಜಮೀರ್ ಅಹ್ಮದ್ ಖಾನ್ ಅವರು ಧ್ವಜಾರೋಹಣ ನೆರವೇರಿಸಲಿದ್ದಾರೆ. ತದನಂತರ ಬೆಳಿಗ್ಗೆ 09:15ಕ್ಕೆ ಶ್ರೀ ಭುವನೇಶ್ವ–



ರಿದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಜಿಲ್ಲೆಯ ಜನತೆಗೆ ಕರ್ನಾಟಕ ರಾಜ್ಯೋತ್ಸವದ ಅಧಿಕೃತ ಸಂದೇಶವನ್ನು ನೀಡಲಿದ್ದಾರೆ. ಗಣ್ಯರಉಪಸ್ಥಿತಿ: ಈ ಅದ್ಧೂರಿ ಸಮಾರಂಭದಲ್ಲಿ ಸಂಸದರಾದ ಈ.ತುಕಾರಾಮ್, ಕೆ. ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯಸಭೆ ಸದಸ್ಯ ಡಾ. ಸೈಯದ್ ನಾಸೀರ್ ಹುಸೇನ್, ಕಂಪ್ಲಿ ಶಾಸಕ ಹಾಗೂ ಕಾವೇರಿ ಹ್ಯಾಂಡ್‌ಲ್ಯೂಮ್ಸ್ ಅಧ್ಯಕ್ಷ ಜೆ.ಎನ್.ಗಣೇಶ್, ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಸೇರಿದಂತೆ ಪ್ರಮುಖರು ಪಾಲ್ಗೊಳ್ಳಲಿದ್ದಾರೆ. ಶಾಸಕರಾದ ಬಿ.ನಾಗೇಂದ್ರ, ಬಿ.ಎಂ.ನಾಗರಾಜ, ನಾರಾ ಭರತ್ ರೆಡ್ಡಿ, ಈ. ಅನ್ನಪೂರ್ಣ, ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ ಬಿ. ಪಾಟೀಲ, ಶಶೀಲ್ ಜಿ. ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆ ಮಹಾಪೌರ ಪಿ. ಗಾದೆಪ್ಪ, ಬುಡಾ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಕೆ.ಎಸ್.ಎಂ.ಸಿ ಉಪಾಧ್ಯಕ್ಷ ಹೆಚ್.ಲಕ್ಷ್ಮಣ್ ಮತ್ತು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ., ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕ ಡಾ. ಪಿ.ಎಸ್.ಹರ್ಷ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ.ಪಿ., ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಎನ್., ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

ವಿ ಎಸ್ ಉಗ್ರಪ್ಪನವರಿಗೆ ಬೆದರಿಕೆ ಹಾಕಿದವರ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರ: ಭೋವಿ ಜನಾಂಗವನ್ನು ಬೆಂಬಲಿಸಿದ ವಿ.ಎಸ್.ಉಗ್ರಪ್ಪನವರಿಗೆ ದಿನಾಂಕ 29/10/2026ರಂದು ಶಿವಮೊಗ್ಗದಲ್ಲಿ ವಡ್ಡರ ಸಮಾಜದವರು,ಘೇರಾವು ಹಾಕುವದರ ಮೂಲಕ ಬೆದರಿಕೆ ಹಾಕಿ ಪುಂಡಾಟಿಕೆ ಮೆರೆದಿದ್ದು ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಅಖಿಲ ಕರ್ನಾಟಕ ಭೋವಿ ಸಮಾಜದ ಮುಖಂಡರು ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ಸಹಾಯಕ ಆಯುಕ್ತರ ಕಾರ್ಯಾಲಯದ ಸಿಬ್ಬಂದಿಗೆ ಸಲ್ಲಿಸಿದರು.

ರಾಜ್ಯದ ಮೂಲ ನಿವಾಸಿಗಳಾದ ಭೋವಿ ಜನಾಂಗದ ಸಮಾಜಕ್ಕೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳಲು ಆಗುತ್ತಿರುವ ತೊಂದರೆ ನಿವಾರಣೆ ಕುರಿತು, ರಾಜ್ಯ ಸರ್ಕಾರ 2016ರಲ್ಲಿ ವಿಧಾನ ಪರಿಷತ್ ಸದನದಲ್ಲಿ ವಿ.ಎಸ್. ಉಗ್ರಪ್ಪನವರ ನೇತೃತ್ವದಲ್ಲಿ 11 ಜನ ವಿಧಾನ ಪರಿಷತ್



ಸದಸ್ಯರನ್ನೊಳಗೊಂಡ ವಿಶೇಷ ಸದನ ಸಮಿತಿ ರಚನೆ ಮಾಡಿ, ಎರಡು ವರ್ಷಗಳ ಕಾಲ ರಾಜ್ಯದ್ಯಾಂತ ಅಧ್ಯಯನ ಮಾಡಿ ಸರಕಾರಕ್ಕೆ ವರದಿ ಸಲ್ಲಿಸಿದೆ.

ಸದರಿ ವರದಿಯಲ್ಲಿ ವಿ.ಎಸ್. ಉಗ್ರಪ್ಪನವರು ಭೋವಿ ಜಾತಿ ಹಾಗೂ ವಡ್ಡರ ಜಾತಿಗಳು ಎರಡೂ ಬೇರೆ.ಬೇರೆ ಜಾತಿಗಳಾಗಿದ್ದು ಸದರಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಭೋವಿ ಹಾಗೂ ವಡ್ಡರ ಈ ಎರಡೂ ಜಾತಿಗಳು ಪರಿಶಿಷ್ಟ ಜಾತಿ ಸೌಲಭ್ಯ ಪಡೆಯಲು ಅರ್ಹವಾಗಿದೆ ಎಂದು ಸದನ ಸಮಿತಿಯ ವರದಿಯಲ್ಲಿ ನಮೂದಿಸಿದ್ದಾರೆ. ಮತ್ತು ಭೋವಿ ಹಾಗೂ ವಡ್ಡರ ಪದಗಳ ವ್ಯತ್ಯಾಸವನ್ನು ಗುರುತಿಸದ ಕೆಲವು ಸರಕಾರಿ ಅಧಿಕಾರಿಗಳು ಕಾಲ ಕಾಲಕ್ಕೆ ಹೊರಡಿಸಿರುವ ಆದೇಶಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೆ, ನೈಜ ಭೋವಿಗಳಿಗೆ ಜಾತಿ ಪ್ರಮಾಣ ಪತ್ರ ನೀಡಲು ವಿನಾಕಾರಣ ವಿಳಂಬ ಹಾಗೂ ನಿರಾಕರಣೆ ಮಾಡುತ್ತಿದ್ದಾರೆಂದು ತಮ್ಮ ವರದಿಯಲ್ಲಿ ದಾಖಲಿಸಿದ್ದಾರೆ.

ಸದರಿ ವಿಷಯವಾಗಿ ಉಗ್ರಪ್ಪನವರು ರಾಜ್ಯದಲ್ಲಿ ಸುಮಾರು 5 ಲಕ್ಷಕ್ಕೂ ಹೆಚ್ಚಿರುವ ನೈಜ ಭೋವಿ ಸಮಾಜಕ್ಕೆ ನ್ಯಾಯ ಕೊಡಿಸಲು ನಿರಂತರ ಶ್ರಮಿಸುತ್ತಿದ್ದಾರೆ. ಆದರೆ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಇಲ್ಲ ಸಲ್ಲದ ಗೊಂದಲದ ಮಾತುಗಳನ್ನು ಕೇಳಿ ನಮ್ಮ ಮೂಲ ಮೇಣೆ, ಡೋಲಿ ಹೊರುವ ಭೋವಿ ಜನಾಂಗವನ್ನು ಬೆಂಬಲಿಸುತ್ತಿರುವ ವಿ.ಎಸ್.ಉಗ್ರಪ್ಪನವರಿಗೆ ವಡ್ಡರ ಸಮಾಜದವರು ಮಾನಸಿಕವಾಗಿ ತೊಂದರೆ ಕೊಡುತ್ತಿರುವುದನ್ನು ಅಖಿಲ ಕರ್ನಾಟಕ ಭೋವಿ ಸಮಾಜ ಸಂಘವು ತೀವ್ರವಾಗಿ ಖಂಡಿಸುತ್ತದೆ.

ಕೂಡಲೇ ವಿ ಎಸ್ ಉಗ್ರಪ್ಪ ಅವರ ವಿರುದ್ಧ ಘೇರಾವು ಹಾಕಿ ಅವರಿಗೆ ಬೆದ–ರಿಕೆ ಹಾಕಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಅವರು ಮನವಿಯಲ್ಲಿ ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಭೋವಿ ಸಮಾಜದ ವಿವಿಧೋದ್ದೇಶ ಕಲ್ಯಾಣ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ರಾಮಣ್ಣ ಭೋವಿ, ಕಾರ್ಯದರ್ಶಿ ಶರಣಬಸಪ್ಪ ಭೋವಿ, ಉಪಾಧ್ಯಕ್ಷ ಶರಣಪ್ಪ ಕಾಳಾಪುರ, ಶರಣಪ್ಪ ಭೋವಿ ಹುನಕುಂಟಿ,ನಿಂಗಪ್ಪ ಕಸಬಾ ಲಿಂಗಸಗೂರ, ಶರಣಪ್ಪ ವೈ,ದೇವಪ್ಪ ಹುನಕುಂಟಿ, ರಮೇಶ್ ಕಾಳಾಪೂರ, ನಾರಾಯಣ ಭೋವಿ, ಬಸವರಾಜ್, ಹುಲುಗಪ್ಪ ಭೋವಿ ಸೇರಿದಂತೆ ಇತರರಿದ್ದರು.

ವಚನ ದರ್ಶನ

ಭವಬಂಧನ ಭವಪಾಶವಾದ ಕಾರಣವೇನಯ್ಯಾ?ಹಿಂದಣ ಜನ್ಮದಲಿ ಲಿಂಗವ ಮರೆದೆನಾಗಿ,ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ,ಶಿವಶರಣರ ಮನನೋಯಿಸಿ,ಭಕ್ತಿಹೀನನಾಗಿ ಕರಸ್ಥಲದ ಲಿಂಗವ ಮರೆದೆನಾಗಿಈ ಬವಣೆ ಬಂದಿತಲ್ಲದೆ,ಅದೆಲ್ಲಿಯದೊ ಪ್ರಮಥ-'ರಾಣೆ,ಮಹಾದಾನಿಯಾದ ನಮ್ಮ ಕೂಡಲಸಂಗಮದೇವಯ್ಯಾ,ನಿಮ್ಮ ಶರಣರ ಸೇವೆಗೆ ಮರಳಿ ಹುಟ್ಟಿಸಿದೆಡೆ ಸಾಲದೆ?

ಜಗಜ್ಯೋತಿ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧ ಹಾಗೂ ಅಥ-'ರ್ಗಭಿತ ವಚನಗಳಲ್ಲಿ ಒಂದಾಗಿದೆ.

ಭವಬಂಧನ ಭವಪಾಶವಾದ ಕಾರಣವೇನಯ್ಯಾ? ಮನುಷ್ಯನಿಗೆ ಈ ಲೌಕಿಕ ಜೀವನ ಅಥವಾ ಸಂಸಾರ ಎಂಬುದು ಒಂದು ಬಂಧನ ಹಾಗೂ ಪಾಶ ಹಗ್ಗ ಬೇಡಿ ಆಗಿ ಕಾಡಲು ಕಾರಣವೇನು? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ.

ಹಿಂದಣ ಜನ್ಮದಲಿ ಲಿಂಗವ ಮರೆದೆನಾಗಿ

ಇದಕ್ಕೆ ಅವರೇ ಉತ್ತರಿಸುತ್ತಾ, "ನಾವು ನಮ್ಮ ಹಿಂದಿನ ಜನ್ಮಗಳಲ್ಲಿ ಭಗವಂತನನ್ನು ಲಿಂಗವನ್ನು ಮರೆತುಬಿಟ್ಟಿವಿ" ಎನ್ನುತ್ತಾರೆ.

ಹಿಂದಣ ಸಿರಿಯಲ್ಲಿ ಜಂಗಮನ ಮರೆದೆನಾಗಿ ನಮಗೆ ಹಿಂದಿನ ಜನ್ಮದಲ್ಲಿ ಸಿರಿ-ಸಂಪತ್ತು ಇದ್ದಾಗ, ಆ ಹಮ್ಮಿನಲ್ಲಿ ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸುವ ಜಂಗಮರನ್ನು (ಶಿವಶರಣರನ್ನು ಅಥ-'ವಾ ಸತ್ಪುರುಷರನ್ನು) ಮರೆತೆವು ಅಥವಾ ಅವರನ್ನು ನಿಂದಿಸಿದೆವು. ಈ ಅಹಂಕಾರ ಮತ್ತು ಮರೆವೇ ನಮ್ಮ ಇಂದಿನ ದುಃಖ ಹಾಗೂ ಸಂಸಾರದ ಬಂಧನಕ್ಕೆ ಮುಖ್ಯ ಕಾರಣ.

ಅರಿದೊಡೀ ಸಂಸಾರವ ಹೊದ್ದಲೀವನೆ ಕೂಡಲಸಂಗಮದೇವಾ! ಒಮ್ಮೆ ನಮಗೆ ಈ ಸತ್ಯದ ಅರಿವಾದರೆ (ನಾವು ಮಾಡಿದ ತಪ್ಪುಗಳ ಅರಿವಾಗಿ, ಭಗವಂತ ಮತ್ತು ಸತ್ಪುರುಷರ ಮಹತ್ವ ತಿಳಿದರೆ), ಓ ಕೂಡಲಸಂಗಮದೇವಾ, ಈ ಮಾಯೆಯ ಸಂಸಾರವು ನಮ್ಮನ್ನು ಮತ್ತೆ ಕಾಡಲು ಸಾಧ್ಯವೇ? ಇಲ್ಲ, ಖಂಡಿತಾ ನಾವು ಈ ಬಂಧನದಿಂದ ಮುಕ್ತರಾಗುತ್ತೇವೆ.

ಸಾರಾಂಶ ಸಂಪತ್ತು ಮತ್ತು ಅಧಿಕಾರ ಬಂದಾಗ ದೇವನನ್ನೂ, ಸಮಾಜವನ್ನೂ ಮರೆಯಬಾರದು. ಅಹಂಕಾರವನ್ನು ಬಿಟ್ಟು ಅರಿವಿನಿಂದ ಬದುಕಿದರೆ ಮಾತ್ರ ಭವಬಂಧನದಿಂದ ಮುಕ್ತಿ ಪಡೆಯಬಹುದು ಎಂಬುದು ಈ ವಚನದ ಸಂದೇಶವಾಗಿದೆ. ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ರಾಯಚೂರು ಜಿಲ್ಲೆಯ ಇಬ್ಬರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಗೌರವ ಜಿಲ್ಲೆಯ ಕೀರ್ತಿ ಹೆಚ್ಚಿಸಿದ ಸಾಧಕರು!

ಈರಣ್ಣ ರುದ್ರಾಕ್ಷಿ ದೇವದುರ್ಗ ಅವರಿಗೆ ಜಾನಪದ ಕ್ಷೇತ್ರದಲ್ಲಿ, ವೀರ ಹನುಮಾನ ರಾಯಚೂರು ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ಕನ್ನಡ ನಾಡು, ನುಡಿ, ಸಂಸ್ಕೃತಿ ಹಾಗೂ ಪರಂಪರೆಯ ಉಳಿವು ಮತ್ತು ಬೆಳವಣಿಗೆಗೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿರುವ ರಾಯಚೂರು ಜಿಲ್ಲೆಯ ಇಬ್ಬರು ಸಾಧಕರಿಗೆ ಪ್ರತಿಷ್ಠಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು ಜಿಲ್ಲೆಯ ಜನತೆಗೆ ಹೆಮ್ಮೆಯ ಸಂಗತಿಯಾಗಿದೆ.

ಜಾನಪದ ಕ್ಷೇತ್ರದಲ್ಲಿ ತಮ್ಮ ಅಪಾರ ಸೇವೆ ಹಾಗೂ ಸಾಧನೆಯ ಮೂಲಕ ಗುರುತಿಸಿಕೊಂಡಿರುವ ದೇವದುರ್ಗದ ಈರಣ್ಣ ರುದ್ರಾಕ್ಷಿ ಅವರಿಗೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಬರವಣಿಗೆ, ಸಾಹಿತ್ಯಿಕ ಚಿಂತನೆ ಮತ್ತು ಕನ್ನಡ ಭಾಷೆಯ ಬೆಳವಣಿಗೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ರಾಯಚೂರಿನ ವೀರ ಹನುಮಾನ



ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಗ್ರಾಮೀಣ ಭಾಗದ ಕಲೆ, ಸಂಸ್ಕೃತಿ, ಜನಪದ ಪರಂಪರೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ನಿರಂತರವಾಗಿ ತೊಡಗಿಸಿಕೊಂಡು ತಮ್ಮದೇ ಆದ ಛಾಪು ಮೂಡಿಸಿರುವ ಈ ಇಬ್ಬರು ಸಾಧಕರಿಗೆ ರಾಜ್ಯಮಟ್ಟದ ಗೌರವ ಸಂದಿರುವುದು ರಾಯಚೂರು ಜಿಲ್ಲೆಯ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಶ್ರೀಮಂತಿ-ಕೆಗೆ ಸಾಕ್ಷಿಯಾಗಿದೆ. ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ನಿರಂತರ ಪರಿಶ್ರಮ, ಬದ್ಧತೆ ಹಾಗೂ ಸಮಾಜದ ಮೇಲಿನ ಕಾಳಜಿ ಅತ್ಯಗತ್ಯ ಎಂಬುದನ್ನು ಈ ಸಾಧಕರು ತಮ್ಮ ಕಾರ್ಯಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

ಜಾನಪದವು ನಮ್ಮ ನೆಲದ ಸಂಸ್ಕೃತಿ, ಆಚಾರ-ವಿಚಾರ, ಜೀವನಶೈಲಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಮಹತ್ವದ ಮಾಧ್ಯಮವಾಗಿದೆ. ಅದೇ ರೀತಿ ಸಾಹಿತ್ಯವು ಸಮಾಜದ ಚಿಂತನೆಗಳಿಗೆ ದಿಕ್ಕು ನೀಡುವ ಹಾಗೂ ಭಾಷೆಯ ಅಸ್ಮಿತೆಯನ್ನು ಉಳಿಸುವ ಶಕ್ತಿಯಾಗಿದೆ. ಈ ಎರಡೂ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ರಾಯಚೂರು ಜಿಲ್ಲೆಯ ಇಬ್ಬರು ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರೆತಿರುವುದು ವಿಶೇಷ ಮಹತ್ವ ಪಡೆದಿದೆ.

ಜಿಲ್ಲೆಯ ಪ್ರತಿಭೆ ಮತ್ತು ಸಾಧಕರನ್ನು ಗುರುತಿಸಿ ರಾಜ್ಯಮಟ್ಟದಲ್ಲಿ ಗೌರವಿಸಿರುವುದು ಯುವಜನತೆಗೆ ಪ್ರೇರಣೆಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಮಂದಿ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಉತ್ತೇಜನ ನೀಡಲಿದೆ.

ಕನ್ನಡ ನಾಡಿನ ಹೆಮ್ಮೆಯ ಈ ಇಬ್ಬರು ಸಾಧಕರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳ ಮುಖಂಡರು, ಸಾಹಿತಿಗಳು, ಕಲಾವಿದರು, ಕನ್ನಡಪರ ಹೋರಾಟಗಾರರು ಹಾಗೂ ಸಾರ್ವಜನಿಕರು ಅಭಿನಂದನೆಗಳನ್ನು ಸಲ್ಲಿಸಿದ್ದು, ಅವರ ಮುಂದಿನ ಜೀವನ ಮತ್ತು ಸಾಧನೆಯ ಹಾದಿಗೆ ಶುಭ ಹಾರೈಸಿದ್ದಾರೆ.

ಅಳಿವಿನಂಚಿನ ಕಲೆಗೆ ಜೀವ ತುಂಬಿದ ಬಳ್ಳಾರಿಯ ಹುಲಿಗೆಮ್ಮ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಮುಡಿಗೆ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ: ಭಾರತೀಯ ಕಲಾ ಪ್ರಪಂಚದ ವೈಶಿಷ್ಟ್ಯಪೂರ್ಣ ಜಾನಪದ ಪ್ರಕಾರವಾದ 'ತೊಗಲುಗೊಂಬೆಯಾಟ'ವನ್ನು ದಶಕಗಳಿಂದ ಜೀವಂತವಾಗಿರಿಸಿರುವ ಜಿಲ್ಲೆಯ ಖ್ಯಾತ ಕಲಾವಿದೆ ಶ್ರೀಮತಿ ಹುಲಿಗೆಮ್ಮ ಅವ-ರಿಗೆ ಕರ್ನಾಟಕ ಸರ್ಕಾರವು ಬಯಲಾಟ ಕ್ಷೇತ್ರದಲ್ಲಿ ಈ ಬಾರಿಯ ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಘೋಷಿಸಿದೆ.

ಪರಂಪರೆಯ ಬಳುವಳಿ: ದಿ. ಹುಲೆಪ್ಪ ಹಾಗೂ ದಿ. ಪಾರ್ವತಮ್ಮ ದಂಪತಿಯ ಪುತ್ರಿಯಾದ ಶ್ರೀಮತಿ ಹುಲಿಗೆಮ್ಮ ಅವರು ಯಾವುದೇ ಔಪಚಾರಿಕ ವಿದ್ಯಾಭ್ಯಾಸ ಹೊಂದಿಲ್ಲದಿದ್ದರೂ, ತಮ್ಮ ತಂದೆಯಿಂದ ಬಳುವಳಿಯಾಗಿ ಬಂದ ತೊಗಲುಗೊಂಬೆಯಾಟ ಕಲೆಯನ್ನು ಬಾಲ್ಯದ 10ನೇ ವಯಸ್ಸಿನಿಂದಲೇ ಕರಗತ ಮಾಡಿಕೊಂಡವರು. ಅಂದಿನಿಂದ ಇಂದಿನವರೆಗೂ ಬಳ್ಳಾರಿ ಜಿಲ್ಲೆ ಸೇರಿದಂತೆ ಸಮಸ್ತ ಕನ್ನಡ ನಾಡಿನ ಸಾಂಸ್ಕೃತಿಕ ವೇದಿಕೆಗಳಲ್ಲಿ ಸತತವಾಗಿ ಕಲಾ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.



ಪ್ರದರ್ಶನದಲ್ಲಿ ಸಾಮಾಜಿಕ ಜಾಗೃತಿ: ಕೇವಲ ಸಾಂಪ್ರದಾಯಿಕ ರಾಮಾಯಣ, ಮಹಾಭಾರತದ ಕಥಾ ಪ್ರಸಂಗಗಳಷ್ಟೇ ಅಲ್ಲದೆ, ತಮ್ಮ ಗೊಂಬೆಯಾಟದ ಮೂಲಕ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡುತ್ತಾ ಬಂದಿದ್ದಾರೆ. ಪ್ರಮುಖವಾಗಿ ಸರ್ಕಾರದ ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಸ್ವಚ್ಛ ಭಾರತ ಅಭಿಯಾನ, ಹಾಗೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯಡಿ "ಮರಳಿ ಬಾ ಶಾಲೆಗೆ" ಎಂಬ ಜಾಗೃತಿ ಪ್ರದರ್ಶನಗಳನ್ನು ಜಿಲ್ಲೆಯಾದ್ಯಂತ ನೀಡಿ ಗಮನ ಸೆಳೆದಿದ್ದಾರೆ. ಮೈಸೂರು ದಸರಾ, ಹಂಪಿ ಉತ್ಸವ, ಲಕ್ಕುಂಡಿ ಉತ್ಸವ ಸೇರಿದಂತೆ ದೇಶದ ವಿವಿಧ ರಾಜ್ಯಗಳ ಪ್ರಮುಖ ವೇದಿಕೆಗಳಲ್ಲಿ ಇವರು ತಮ್ಮ ತಂಡದೊಂದಿಗೆ ಪ್ರದರ್ಶನ ನೀಡಿದ್ದಾರೆ.

ವೈಯಕ್ತಿಕ ಬದುಕಿನ ಕಣ್ಣೀರಿನ ಕಥೆ – ಹುಲಿಗೆಮ್ಮನವರ ಅನಿಸಿಕೆ: ಪ್ರಶಸ್ತಿ ಗರಿ ಮುಡಿಗೇರಿರುವ ಈ ಸಂದರ್ಭದಲ್ಲಿ ತಮ್ಮ ಕಷ್ಟದ ದಿನಗಳನ್ನು ನೆನೆದು ಹುಲಿಗೆಮ್ಮ ಅವರು ಭಾವುಕರಾಗಿದ್ದಾರೆ. "ನನ್ನ ಜೀವನ ಸುಲಭದ್ದಾಗಿರಲಿಲ್ಲ. ಮದುವೆಯಾದ ಕೆಲ ವರ್ಷಗಳಲ್ಲಿ ನನ್ನ ಪತಿ ತೀರಿಕೊಂಡರು. ನನಗೆ ಮಕ್ಕಳೂ ಇಲ್ಲ. ಒಂಟಿಯಾಗಿ ಇಡೀ ಜೀವನವನ್ನು ಸಾಗಿಸುವುದು ತುಂಬಾ ಕಷ್ಟವಾಗಿತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ನನ್ನ ತಮ್ಮ ಜೀವನ ನಡೆಸಲು ಸ್ವಲ್ಪ ಸಹಕಾರ ನೀಡಿದರು. ಎಲ್ಲಾ ಕಷ್ಟಗಳ ನಡುವೆಯೂ ಕಣ್ಣೀರು ಒರೆಸಿಕೊಂಡು, ಹೆದರದೆ ಕಷ್ಟಪಟ್ಟು ನಮ್ಮ ಪೂರ್ವಜರ ಸಂಸ್ಕೃತಿಯಾದ ಈ ತೊಗಲುಗೊಂಬೆ ಆಟವನ್ನು ಉಳಿಸಿಕೊಂಡು ಬಂದಿದ್ದೇನೆ" ಎಂದು ಅವರು ತಮ್ಮ ಅನಿಸಿಕೆಯನ್ನು ಹಂಚಿಕೊಂಡು ಪ್ರಸಸ್ತಿ ಸಿಕ್ಕಿದಕ್ಕಾಗಿ ಸಂತೋಷಪಟ್ಟರು.

ಪ್ರಸ್ತುತ ಬಳ್ಳಾರಿಯ 'ಶ್ರೀ ಹುಲಿಕುಂಟೆರಾಯ ತೊಗಲುಗೊಂಬೆ ಕಲಾತಂಡ'ದ ಸಕ್ರಿಯ ಸದಸ್ಯರಾಗಿರುವ ಹುಲಿಗೆಮ್ಮ ಅವರು, ಹೊಸ ಪೀಳಿಗೆಯ ಯುವಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಈ ಕಲೆಯಲ್ಲಿ ತರಬೇತಿ ನೀಡುವ ಮೂಲಕ ಕಲೆಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಸುದೀರ್ಘ ಕಲಾ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರವು ಈ ಗೌರವ ಸಮರ್ಪಿಸಿದೆ.

ಸತತ ಐದನೇ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಶಶೀಲ್ ಜಿ. ನಮೋಶಿಗೆ ಕೆ. ಕರಿಯಪ್ಪ ಅಭಿನಂದನೆ

❏ ನೈಜ್ಯ ದೆಸೆ ನ್ಯೂಸ್

ಕಲಬುರಗಿ: ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆಯಲ್ಲಿ ಸತತ ಐದನೇ ಬಾರಿಗೆ ಗೆಲುವು ಸಾಧಿಸಿ ವಿಧಾನ ಪರಿಷತ್ ಸದಸ್ಯರಾಗಿ ಮರು



ಆಯ್ಕೆಯಾಗಿರುವ ಶಶೀಲ್ ಜಿ. ನಮೋಶಿ ಅವರನ್ನು ಕೆ. ಕ-ರಿಯಪ್ಪ ಅವರು ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಅಕ್ಟೋಬರ್ 28, 2026ರಂದು ಪ್ರಕಟಗೊಂಡ ಚುನಾವಣಾ ಫಲಿತಾಂಶದಲ್ಲಿ ಐದನೇ ಬಾರಿಗೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ, ಕಲಬುರಗಿಯಲ್ಲಿರುವ ಅವರ ನಿವಾಸಕ್ಕೆ ಭೇಟಿ ನೀಡಿದ ಕೆ. ಕರಿಯಪ್ಪ ಅವರು ಹೂಗುಚ್ಛ ನೀಡಿ ಆತ್ಮೀಯವಾಗಿ ಶುಭಾಶಯ ಕೋರಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಮೈಸೂರು ರಾಜ ಮನೆತನದ ಬಗ್ಗೆ ಕೆಟ್ಟದಾಗಿ ಮಾತನಾಡಿಲ್ಲ ಅವರು ಕ್ಷಮೆ ಕೇಳುವ ಅಗತ್ಯವಿಲ್ಲ ಕಾಂಗ್ರೆಸ್ ಮುಖಂಡ ದಡದಳಿ ಮಹದೇವ್

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ವಿಶ್ವವಿಖ್ಯಾತ ಮೈಸೂರು ದಸರಾ ಬಹಳ ಯಶಸ್ವಿಯಾಗಿ ಅದ್ದೂ-ರಿಯಾಗಿ ವಿಜ್ರಮಣೆಯಿಂದ ಜರುಗಿದ್ದು ಈಗ ಈ ವಿಚಾರವಾಗಿ ರಾಜಮಾತೆ ಪ್ರಮೋದ ದೇವಿಯವರು ಸರ್ಕಾರಕ್ಕೆ ಪತ್ರ ಬರೆದ ವಿಚಾರವಾಗಿ ಈ ವಿಚಾರವಾಗಿ ಮೈಸೂರು ಜಿಲ್ಲಾ ಉಸ್ತುವಾರಿ

ಸಚಿವರು ಹಾಗೂ ನಗರಾಭಿವೃದ್ಧಿ ಸಚಿವರು ಆದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಸರ್ಕಾರಕ್ಕೆ ಪತ್ರ ಬರೆದ ವಿಚಾರವಾಗಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು ಇದೇ ವಿಚಾರಗಳನ್ನು ಮುಂದಿಟ್ಟುಕೊಂಡು ಕೆಲವು ಬಿಜೆಪಿ ಮುಖಂಡರು ಜೆಡಿಎಸ್ ಮುಖಂಡರು ಕೆಲವು



ಸಂಘಟನೆ ಮುಖಂಡರುಗಳು ಸಚಿವರು ಮೈಸೂರು ಮಹಾರಾಜರ ವಿರುದ್ಧ ಹಗುರವಾಗಿ ಮಾತನಾಡಿದರೆ ಎಂದು ಸಚಿವರ ವಿರುದ್ಧ ಇಲ್ಲಿ ಸ್ಥಳದ ಆರೋಪಗಳನ್ನು ಮಾಡುತ್ತಾ ಪ್ರತಿಭಟನೆ ಮಾಡುತ್ತಾ ಜನರನ್ನು ದಾರಿ ತಪ್ಪಿಸುವಂತೆ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ದಡದಳಿ ಮಹದೇವ್ರವರು ಸಚಿವರ ವಿರುದ್ಧ ಹೇಳಿಕೆ ನೀಡುತ್ತಿರುವ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು ಅವರು ತಮ್ಮ ಗ್ರಾಮದ ಬಳಿ ಸುದ್ದಿದರೊಂದಿಗೆ ಮಾತನಾಡುತ್ತಾ ಮೈಸೂರು ಜಿಲ್ಲೆ ಉಸ್ತುವಾರಿ ಸಚಿವರು ವಿಶ್ವವಿಖ್ಯಾತ ಮೈಸೂರು ದಸರಾ ವನ್ನು ಬಹಳ ಯಶಸ್ವಿಯಾಗಿ ನಡೆಸಿದ್ದಾರೆ ಜನರು ಕೂಡ ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ ಯಾವುದೋ ಒಂದು ಸಣ್ಣ ವಿಚಾರಕ್ಕೆ ಕೆಲವು ಬಿಜೆಪಿ ಮುಖಂಡರು

ಜೆಡಿಎಸ್ ಮುಖಂಡರು ರಾಜ-ಕೀಯ ಮಾಡುತ್ತಾ ಸಚಿವರು ಮಹಾರಾಜರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ ಹಗುರವಾಗಿ ಮಾತನಾಡಿದರೆ ಎಂದು ಆರೋಪಿಸಿ ಅವರ ವಿರುದ್ಧ ಪ್ರತಿಭಟನೆ ಮತ್ತು ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ ಸಚಿವರು ರಾಜ ಮನೆತನದ ಬಗ್ಗೆ ಆಗಲಿ ಅಥವಾ ರಾಜ ಮಾತೆಯ ಕುಟುಂಬದವರ ಬಗ್ಗೆ ಆಗಲಿ ಹಗುರವಾಗಿ ಮಾತನಾಡಿಲ್ಲ ಅವರು ಕಾನೂನಿನ ಪ್ರಕಾರವಾಗಿ ಮಾತನಾಡಿದರೆ ವರ್ತು ಅವರು ಯಾವುದೇ ತಪ್ಪು ಮಾತುಗಳಾಡಿಲ್ಲ ಅವರು ಕ್ಷಮೆ ಕೇಳುವ ಅಗತ್ಯವಿಲ್ಲ ಎಂದು ಹೇಳಿದ ಮಹದೇವ ರವರು ಅವರು ಹಾಡಿರುವ ಮಾತುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಿ, ಅದರಲ್ಲಿ ಯಾವುದೇ ತಪ್ಪಿಲ್ಲ ಎಂದು ಹೇಳಿರುವ ಅವರು ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರು ಕೆಲವು ಸಂಘಟನೆಗಳು ಅವರ ಹೆಸರನ್ನು ಮೈಸೂರು ಜಿಲ್ಲೆಯಲ್ಲಿ ಕೆಡಿಸಬೇಕು ಎಂಬ ಉದ್ದೇಶದಿಂದ ಈ ರೀತಿಯ ಅಪಪ್ರಚಾರ ಮಾಡಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಆಕೋಶ ಹೊರ ಹಾಕಿದರು

ಹೊಟ್ಟೆ ಉರಿಸುತ್ತಿವೆ ತರಕಾರಿ ಬೆಲೆಗಳು : ದೀಪಾವಳಿ ಸಮಯದಲ್ಲೇ ಶ್ರೀಸಾಮಾನ್ಯನಿಗೆ ಸಂಕಷ್ಟ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿರುವ ಬೆನ್ನಲ್ಲೇ ತರಕಾರಿ ಬೆಲೆಯೂ ಸಹ ಸದ್ದಿಲ್ಲದೆ ಏರಿಕೆಯಾಗುತ್ತಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬೀಳುವಂತಾಗಿದೆ.ದಿನಸಿ ಪದಾರ್ಥಗಳ ಬೆಲೆ ಏರಿಕೆಯಿಂದ ತತ್ತ-ರಿಸಿರುವ ಜನರು ನ.1 ರಿಂದ ಹಾಲಿನ ಬೆಲೆ ಹೆಚ್ಚಾಗಲಿರುವ ಬೆನ್ನಲ್ಲೇ ತರಕಾರಿಗಳ ಬೆಲೆಯೂ ಸಹ ಏರುತ್ತಿದ್ದು, ಶ್ರೀಸಾಮಾನ್ಯರ ಜೀವನ ಭಾರೀ ಸಂಕಷ್ಟಕ್ಕೆ ಸಿಲುಕಲಿದೆ.

ರಾಜ್ಯಾದ್ಯಂತ ದೀಪಾವಳಿಗೆ ಸಿದ್ಧತೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಬೆಲೆ ಏರಿಕೆ ಜನರನ್ನು ಹೈರಾಣಾಗಿಸುತ್ತಿದೆ. ರಾಜ್ಯದಲ್ಲಿ ಮಳೆ ಕೈಕೊಟ್ಟ ಪರಿಣಾಮ ದಿನಸಿ ವಸ್ತುಗಳು ಸೇರಿದಂತೆ ತರಕಾರಿ



ಬೆಳೆಗಳ ಮೇಲೆ ಭಾರೀ ಪರಿಣಾಮ ಬೀರಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ. ಎಲ್ಲಾ ತರಕಾರಿಗಳ ಬೆಲೆ ದುಪ್ಪಟ್ಟಾಗಿದ್ದು, ಮತ್ತಷ್ಟು ಪ್ರಮಾಣದಲ್ಲಿ ಏರಿಕೆಯಾಗುವ ಸಾಧ್ಯತೆಯಿದ್ದು, ಮುಂದಿನ ಜೀವನ ಹೇಗೆ ಎಂಬ ಆತಂಕ ಹೆಚ್ಚಿಸಿದೆ. ಬೀನ್ಸ್ ಶತಕ ಭಾ-ರಿಸಿದ್ದು, ಈರುಳ್ಳಿಯೂ ಕೂಡಾ ಸೆಂಚುರಿ ಆಜುಬಾಜಿನಲ್ಲಿದೆ. ಸೊಪ್ಪುಗಳ ಬೆಲೆಯೂ ಸಹ ಡಬ್ಬಲ್ ಆಗಿದ್ದು, ಕೊತ್ತಂಬರಿ ಕೆ-ಜಿಗೆ 110 ರಿಂದ 120 ರೂ. ದಾಟಿದೆ.

ತರಕಾರಿಗಳ ಬೆಲೆ : ದಪ್ಪ ಈರುಳ್ಳಿ ಕೆಜಿಗೆ 60 ರಿಂದ 70 ರೂ., ಹುರಳಿಕಾಯಿ ?100 ರಿಂದ 110 ರೂ., ನುಗ್ಗೆಕಾಯಿ 140ರಿಂದ 150 ರೂ., ಕ್ಯಾರೆಟ್ 60 ರಿಂದ 70 ರೂ., ಹಸಿನಮೆಣಸಿನಕಾಯಿ 90 ರಿಂದ 100 ರೂ., ಕ್ಯಾಪ್ಸಿಕಂ 90 ರಿಂದ 100 ರೂ., ಆಲೂಗಡ್ಡೆ 50 ರಿಂದ 60 ರೂ., ಬೆಂಡೆಕಾಯಿ-50 ರಿಂದ 60 ರೂ., ಬದನೆಕಾಯಿ 50 ರೂ., ಎಲೆಕೋಸು 60 ರೂ., ನವಿಲುಕೋಸು 60 ರೂ., ಟೊಮ್ಯಾಟೊ 50 ರೂ. ನಂತೆ ಚಿಲ್ಲರೆ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆ.

ಸೊಪ್ಪುಗಳ ಬೆಲೆಯಂತೂ ಭಾರೀ ಏರಿಕೆಯಾಗಿದ್ದು, ಕೆಜಿ ಲೆಕ್ಕದಲ್ಲಿ ಕೊತ್ತಂಬರಿ 110 ರಿಂದ 120 ರೂ., ಸಬ್ಬಕ್ಕಿ 150 ರೂ., ಪುದೀನ 100 ರೂ., ಪಾಲಾಕ್ 100 ರೂ., ದಂಟು 80 ರೂ., ಮೆಂತ್ಯೆ 150 ರೂ., ಕರಿಬೇವು 100 ರೂ.ಗೆ ಏರಿಕೆಯಾಗಿದ್ದು, ಬೆಲೆ ನೋಡಿ ಗ್ರಾಹಕರು ಖರೀದಿಗೆ ಹಿಂದುಮುಂದು ನೋಡುವಂತಾಗಿದೆ. ಒಂದು ಕೆಜಿ ತೆಗೆದುಕೊಳ್ಳುತ್ತಿದ್ದವರು ಅರ್ಧ ಕೆಜಿ ತೆಗೆದುಕೊಂಡು ಹೋಗುತ್ತಿದ್ದ ದೃಶ್ಯಗಳು ತರಕಾರಿ ಅಂಗಡಿಗಳಲ್ಲಿ ಕಂಡುಬಂದವು. ದಿನದಿಂದ ದಿನಕ್ಕೆ ಬಿಸಲು ಏರಿಕೆಯಾಗುತ್ತಿದ್ದು, ಜೊತೆಗೆ ಮಳೆಯ ಕೊರತೆಯಿಂದ ಬೋರ್‌ವೆಲ್‌ಗಳಲ್ಲಿ ನೀರಿನ ಮಟ್ಟ ಕಡಿಮೆಯಾಗುತ್ತಿರುವುದ-ರಿಂದ ಉತ್ಪಾದನೆ ಕುಂಠಿತವಾಗಿ ಬೆಲೆ ಏರಿಕೆಗೆ ಕಾರಣವಾಗಿದೆ. ದೀಪಾವಳಿ ವೇಳೆಗೆ ಮಳೆ ಬಂದರೆ ಸ್ವಲ್ಪ ಸಮಸ್ಯೆ ತಗ್ಗಬಹುದು. ಇಲ್ಲವಾದರೆ ಎಲ್ಲಾ ವಸ್ತುಗಳ ಬೆಲೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ ಎಂದು ಕೊಬ್ಬರಿ ವ್ಯಾಪಾರಿ ರವೀಶ್ ಎಂಬುವವರು ತಿಳಿಸಿದ್ದಾರೆ.

ವೈದಿಕ ತಳಹದಿಯೇ ಹಿಂದೂ ಸಂಸ್ಕೃತಿಯ ಜೀವಾಳ: ಸುಜ್ಞಾನತೀರ್ಥ ಮಹಾಸ್ವಾಮಿ

ಶ್ರೀ ವಿಶ್ವಕರ್ಮ ಭವನದ ಶ್ರೀಮತಿ ಶ್ರೀ ಡಿ ವೀರಪ್ಪ ಆಚಾರ್ ಕಲ್ಯಾಣ ವೇದಿಕೆ ಉದ್ಘಾಟನಾ ಸಮಾರಂಭ ಜರುಗಿತು

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: "ಹಿಂದೂ ಸಂಸ್ಕೃತಿಯು ವೈದಿಕ ತಳಹದಿಯ ಮೇಲೆ ನಿಂತಿದೆ. ಸಮಾಜವು ಎಲ್ಲ ರಂಗಗಳಲ್ಲೂ ಅಭಿವೃದ್ಧಿ ಹೊಂದಲು ಧಾರ್ಮಿಕ ಕಾರ್ಯಗಳು, ಸಾಮಾಜಿ-ಕ ಸಾಮರಸ್ಯ ಮತ್ತು ಸಂಪ್ರದಾಯಗಳು ಅತ್ಯಗತ್ಯ. ಈ ನಿಟ್ಟಿನಲ್ಲಿ ಧಾರ್ಮಿಕ ಪೀಠಗಳ ಅವಶ್ಯಕತೆ ಹಾಗೂ ಮಾರ್ಗದರ್ಶನ ಸಮಾಜಕ್ಕೆ ಸದಾ ಬೇಕಾಗಿದೆ" ಎಂದು ಅರೇಮಾದನಹಳ್ಳಿ ವಿಶ್ವಕರ್ಮ ಪೀಠದ ಪರಮಪೂಜ್ಯ ಸುಜ್ಞಾನತೀರ್ಥ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಪಟ್ಟಣದ 19ನೇ ವಾರ್ಡಿನಲ್ಲಿರುವ ಕಾಳಿಕಾ ಕಮಠೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ವಿಶ್ವಕರ್ಮ ಸಮಾಜದ ಸಮುದಾಯ ಭವನ ಹಾಗೂ ಶ್ರೀ ಡಿ. ವೀರಪ್ಪ ಆಚ-ಾರ್ ಕಲ್ಯಾಣ ವೇದಿಕೆಯ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. "ಧಾರ್ಮಿಕ ಸಂಘಟನೆಗಳ ಮೂಲಕ ಸಮಾಜದ



ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ವಿಶ್ವಕರ್ಮ ಸಮಾಜದವರು ತಮ್ಮ ಕುಲಕಸುಬನ್ನು ನಿಷ್ಠೆಯಿಂದ ಮಾಡಿಕೊಂಡು ಬರುತ್ತಿದ್ದು, ಈ ಬಂಗಾರದಂತಹ ವೃತ್ತಿಯಲ್ಲೇ ಅವರ ಬದುಕು ಹಸನಾಗಲಿದೆ. ಪೋಷಕರು ತಮ್ಮ ಮಕ್ಕಳಿಗೆ ಕೇವಲ ಆದ-ುನಿಕ ಶಿಕ್ಷಣ ನೀಡುವುದಷ್ಟೇ ಅಲ್ಲದೆ, ಅದರ ಜೊತೆಗೆ ಉತ್ತಮ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಕಲಿಸಬೇಕು" ಎಂದು ಶ್ರೀಗಳು ಸಲಹೆ ನೀಡಿದರು.

ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಿ: ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನ ಮೂರ್ತಿ ಪಿ. ಅವರು, "ವಿಶ್ವಕರ್ಮ ಸಮಾಜದ ಬಾಂಧವರು ಸರ್ಕಾರದ ಪ್ರತಿಯೊಂದು ಯೋಜನೆಗಳ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಬೇಕು.

ನಮ್ಮ ಸಾಂಪ್ರದಾಯಿಕ ಕುಲಕಸುಬನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ನಿರಂತರವಾಗಿ ನಡೆಯಬೇಕು. ಸಮಾಜ-ಕ್ಕೆ ಸಿಗಬೇಕಾದ ಎಲ್ಲಾ ಸೌಲತ್ತು ಹಾಗೂ ಸೌಲಭ್ಯಗಳನ್ನು ತಲುಪಿಸಲು ನಾನು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ" ಎಂದು ಭರವಸೆ ನೀಡಿದರು. ಆನೆಗುಂದಿಯ ಪಂಚ ಸಿಂಹಾಸನ ಸರಸ್ವತಿ ಪೀಠದ ಕಾಳ ಹಸ್ತೇಂದ್ರ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು. ಕಂಪ್ಲಿ ವಿಶ್ವಕರ್ಮ ಸಮಾಜದ ಅಧ್ಯಕ್ಷ ಡಿ. ರುದ್ರಪ್ಪ ಆಚ-ಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಪೂಜ್ಯ ಮಹಾಸ್ವಾಮಿಗಳನ್ನು ಹಾಗೂ ಆಗಮಿಸಿದ್ದ ಪ್ರಮುಖ ಗಣ್ಯರನ್ನು ಹಾಗೂ ಕಟ್ಟಡದಾನಿಗಳಾದ ಡಿ ರಾಘವೇಂದ್ರ ಚಾರ್ ಹಾಗೂ ಬೆಳ್ಳಿದಾನಿಗಳಿಗೆ ಸಮಾಜದ ಮುಖಂಡರಿಗೆ ಸಮಾಜದ ವತಿಯಿಂದ ಭವ್ಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಕೆಎಎಸ್ ನಿವೃತ್ತ ಜಂಟಿ ನಿರ್ದೇಶಕ ಮಂಟೇ ಲಿಂಗಾಚಾರ್, ವಿಜಯನಗರ ಜಿಲ್ಲಾಧ್ಯಕ್ಷ ಸಿ. ರಾಜಣ್ಣ, ಕೊಪ್ಪಳ ಜಿಲ್ಲಾಧ್ಯಕ್ಷ ನಾಗೇಶ್ ಕುಮಾರ ಕಂಸಾಲಿ, ಕಂಪ್ಲಿ ವಿಶ್ವಕರ್ಮ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಡಿ. ವೀಣಾ, ಉಪಾಧ್ಯಕ್ಷ ಚಂದ್ರಶೇಖರ ಆಚಾರ್, ಪ್ರಧಾನ ಕಾರ್ಯದರ್ಶಿ ಡಿ. ಮೌನೇಶ್, ಕರ್ನಾಟಕ ಮಹಿಳಾ ಮಂಡಳಿ ಅಧ್ಯಕ್ಷೆ ಶೋಭಾ, ಮುಖಂಡರಾದ ಡಿ. ರಾಘವೇಂದ್ರ ಆಚ-ಾರ್, ಉಮಾದೇವಿ ಹೊಸಪೇಟೆ ಸೇರಿದಂತೆ ಸಮಾಜದ ನೂರಾರು ಬಂಧುಗಳು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101